ಭಾರತೀಯ ಬ್ಯಾಂಕಿಂಗ್

ಬಿ.ಕಾಂ. 4ನೇ ಸೆಮಿಸ್ಟರ್

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

(ಸಿ.ಬಿ.ಸಿ.ಎಸ್. ನೂತನ ಪಠ್ಯಕ್ರಮದಂತೆ)

ಡಾ. ಬಸವರಾಜ ಕುಮ್ಮೂರ

Scanned with CamScanner

ಪರಿವಿಡಿ

ಅಧ್ಯಾಯ I – ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ಪರಿಚಯ **1–22**

1. ಬ್ಯಾಂಕಿನ ಅರ್ಥ ಮತ್ತು ವ್ಯಾಖ್ಯೆಗಳು **1**
2. ಬ್ಯಾಂಕಿನ ಮಹತ್ವ **3**
3. ಭಾರತದಲ್ಲಿ ಬ್ಯಾಂಕುಗಳ ಬೆಳವಣಿಗೆ **5**
4. ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ರಚನೆ **11**
   - i. ಭಾರತದ ರಿಝರ್ವ್ ಬ್ಯಾಂಕು **13**
   - ii. ವಾಣಿಜ್ಯ ಬ್ಯಾಂಕುಗಳು, ಅಭಿವೃದ್ಧಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ನಬಾರ್ಡ್, ಭೂ ಅಭಿವೃದ್ಧಿ ಬ್ಯಾಂಕುಗಳು, ಎಕ್ಸಿಮ್ ಬ್ಯಾಂಕು. (ಈ ಎಲ್ಲ ಬ್ಯಾಂಕುಗಳ ರೂಪರೇಶೆಗಳು) **14**

ಅಧ್ಯಾಯ II – ಭಾರತೀಯ ವಾಣಿಜ್ಯ ಬ್ಯಾಂಕುಗಳು **23–74**

1. ಸಾರ್ವಜನಿಕ ವಲಯ, ಖಾಸಗಿ ವಲಯ ಮತ್ತು ವಿದೇಶಿ ವಿನಿಮಯದ ಬ್ಯಾಂಕುಗಳು **23**
2. ಕಾರ್ಯಗಳು ಮತ್ತು ಸೇವೆಗಳು **24**
3. ಬ್ಯಾಂಕುಗಳು ಮತ್ತು ಆರ್ಥಿಕಾಭಿವೃದ್ಧಿ **53**
4. ಬ್ಯಾಂಕುಗಳ ಅಢಾವೆ ಪತ್ರ **57**
5. ಬಂಡವಾಳ ನಿರ್ವಹಣೆ **61**
6. ಹೂಡಿಕೆಯ ನೀತಿಯ ತತ್ವಗಳು **67**

ಅಧ್ಯಾಯ III – ಭಾರತದ ರಿಝರ್ವ್ ಬ್ಯಾಂಕು **75–96**

1. ಕೇಂದ್ರ ಬ್ಯಾಂಕಿನ ಸಾಂಪ್ರದಾಯಿಕ ಮತ್ತು ಅಭಿವೃದ್ಧಿ ಕಾರ್ಯಗಳು **75**
2. ಕೃಷಿ ಹಣಕಾಸು ಮತ್ತು ಕೈಗಾರಿಕಾಭಿವೃದ್ಧಿಯಲ್ಲಿ ಭಾರತದ ರಿಝರ್ವ್ ಬ್ಯಾಂಕಿನ ಪಾತ್ರ. **76**
3. ಹಣಕಾಸಿನ ಮತ್ತು ಸಾಲ ನೀತಿಗಳು– ಬ್ಯಾಂಕು ದರ, ರೆಪೋ ದರ, ದ್ರವತ್ವ– ಹೊಂದಾಣಿಕೆ ಸೌಲಭ್ಯ, ಬಡ್ಡಿ ದರದ ನೀತಿ, ಅವಿಭಾಜ್ಯ ಸಾಲದ ದರಗಳು, ಖಜಾನೆ ನಿರ್ವಹಣೆ. (ರೂಪರೇಖೆಗಳು ಮಾತ್ರ) **88**

Scanned with CamScanner

ಅಧ್ಯಾಯ IV – ಭಾರತೀಯ ಬ್ಯಾಂಕಿನಲ್ಲಿನ ಇತ್ತೀಚಿನ ಪ್ರವೃತ್ತಿಗಳು		**97–140**
1.	ಹಣಕಾಸಿನ ಪ್ರಕಾರಗಳು	97
2.	ಮರುಪಾವತಿ ವಿಧಾನಗಳು	103
3.	ಪ್ರವಾಸೋದ್ಯಮ ಬಂಡವಾಳ	105
4.	ಅಪವರ್ತನ ಸೇವೆಗಳು	108
5.	ಇಂಟರ್‌ನೆಟ್ ಮತ್ತು ಮೊಬೈಲ್ ಬ್ಯಾಂಕಿಂಗ್	113
6.	ಠೇವಣಿ ವಿಮಾ ಯೋಜನೆ	122
7.	ಚಿನ್ನದ ಠೇವಣಿ ಯೋಜನೆ	124
8.	ಬಂಡವಾಳದ	128
9.	ಸ್ವತ್ತು (ಆಸ್ತಿಗಳ) ವರ್ಗೀಕರಣ	132
10.	ಒದಸಿಸುವ ಅವಶ್ಯಕತೆಗಳು	133
11.	ಪ್ರಕಟಣೆಯ ಮಾನದಂಡಗಳು	135
12.	ಗಂಡಾಂತರ ನಿರ್ವಹಣೆ ವ್ಯವಸ್ಥೆ	135
ಅಧ್ಯಾಯ V – ಬ್ಯಾಂಕಿಂಗ್ ಕ್ಷೇತ್ರದ ಸುಧಾರಣೆಗಳು		**141–172**
1.	ಅರ್ಥ ಮತ್ತು ಉದ್ದೇಶಗಳು	141
2.	ಬ್ಯಾಂಕಿಂಗ್ ಸುಧಾರಣೆಯ ಕಾರಣಗಳು ಮತ್ತು ಮಹತ್ವ	142
3.	ನರಸಿಂಹನ ಸಮಿತಿಯ ಶಿಫಾರಸುಗಳು ಬಂಡವಾಳ	145
4.	ಸಮರ್ಪಕತೆಯ ಮಾನಂಡಗಳು	149
5.	ಮರು ಬಂಡವಾಳೀಕರಣ	152
6.	ವಿವೇಕತೆಯ ನಿಯಮಗಳು	154
	(ಎ) ಆದಾಯ ಗುರುತಿಸುವಿಕೆ	156
	(ಬಿ) ಆಸ್ತಿ (ಸ್ವತ್ತುಗಳು) ವರ್ಗೀಕರಣದ ಮಾನದಂಡಗಳು	158
	(ಸಿ) ಒದಗಿಸುವಿಕೆ ಮಾನದಂಡಗಳು (ನಿಯಮಗಳು)	158
	(ಡಿ) ಬಡ್ಡಿ ದರದ ರಚನೆ	162
	(ಇ) ಬಹಿರಂಗಪಡಿಸುವಿಕೆಯ ನಿಯಮಗಳು	165
	(ಎಫ್) ಬ್ಯಾಂಕಿಂಗ್‌ನಲ್ಲಿನ ತಾಂತ್ರಿಕ ಬೆಳವಣಿಗೆಗಳು	167
	(ಜಿ) ಬ್ಯಾಂಕಿಂಗ್ ಓಂಬುಡ್ಮನ್ ಯೋಜನೆ	170

Scanned with CamScanner

1. ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ಪರಿಚಯ (Introduction to Indian Banking System)

1. ಬ್ಯಾಂಕಿನ ಅರ್ಥ ಮತ್ತು ವ್ಯಾಖ್ಯೆಗಳು
2. ಬ್ಯಾಂಕಿನ ಮಹತ್ವ
3. ಭಾರತದಲ್ಲಿ ಬ್ಯಾಂಕುಗಳ ಬೆಳವಣಿಗೆ
4. ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ರಚನೆ
   i. ಭಾರತದ ರಿಝರ್ವ್ ಬ್ಯಾಂಕು
   i. ವಾಣಿಜ್ಯ ಬ್ಯಾಂಕುಗಳು, ಅಭಿವೃದ್ಧಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ನಬಾರ್ಡ್, ಭೂ ಅಭಿವೃದ್ಧಿ ಬ್ಯಾಂಕುಗಳು, ಎಕ್ಸಿಮ್ ಬ್ಯಾಂಕು. (ಈ ಎಲ್ಲ ಬ್ಯಾಂಕುಗಳ ರೂಪರೇಶೆಗಳು)

1. ಪೀಠಿಕೆ (Introduction) :

ಬ್ಯಾಂಕು ಎಂಬುದು ಒಂದು ಹಣಕಾಸಿನ ಸಂಸ್ಥೆಯಾಗಿದೆ. ಇದು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುತ್ತದೆ ಮತ್ತು ಹೂಡಿಕೆಗಾಗಿ ಹಣದ ಅವಶ್ಯಕತೆ ಇರುವವರಿಗೆ ಅದು ಸಾಲವನ್ನು ನೀಡುತ್ತದೆ.

'ಬ್ಯಾಂಕು' ಎಂಬ ಇಟಲಿಯ ಭಾಷೆಯ ಪದವಾದ 'ಬ್ಯಾಂಕಸ್' (Bancus)ಎಂಬ ಪದದಿಂದ ಉದ್ಭವಾಗಿದೆ ಎಂಬುದು ಒಂದು ಅಭಿಪ್ರಾಯವಾದರೆ, ಮತ್ತೊಂದು ಅಭಿಪ್ರಾಯದ ಪ್ರಕಾರ, 'ಬ್ಯಾಂಕ' ಎಂಬ ಪದ ಗ್ರೀಕ್ ಪದಗಳಾದ 'ಬ್ಯಾಂಕಸ್' (Bancus) ಅಥವಾ 'ಬ್ಯಾಂಕ್ಯು' (Banque) ಎಂಬ ಪದದಿಂದ ಹುಟ್ಟಿದೆ. ಈ ಎಲ್ಲಾ ಪದಗಳು 'ಬೆಂಚು' ಎಂಬ ಅರ್ಥವನ್ನು ಸೂಚಿಸುತ್ತದೆ. ಹಿಂದಿನ ಕಾಲದಲ್ಲಿ ಸಾಹುಕಾರರು ಮಾರುಕಟ್ಟೆ ಸ್ಥಳಗಳಲ್ಲಿ ಬೆಂಚು ಹಾಕಿ ಅದರ ಮೇಲೆ ಕುಳಿತುಕೊಂಡು ಹಣದ ಲೇವಾದೇವಿ ವ್ಯವಹಾರ ಮಾಡುತ್ತಿದ್ದರು. ಅವರು ತಮ್ಮ ಬೆಂಚಿನ ಮೇಲೆ ಕುಳಿತುಕೊಂಡು ಬೇರೆಬೇರೆ ದೇಶದ ನಾಣ್ಯಗಳನ್ನು ಪ್ರದರ್ಶಿಸಿ ವಿನಿಮಯ ಮತ್ತು ಸಾಲದ ವ್ಯವಹಾರಗಳನ್ನು ಕೈಕೊಳ್ಳುತ್ತಿದ್ದರು. ಆ ಪ್ರಕಾರ ಹಣದ ಲೇವಾದೇವಿ ವ್ಯವಹಾರಕ್ಕೆ ನೆರವಾಗುತ್ತಿದ್ದ ಬೆಂಚು ಮುಂದೆ ಬ್ಯಾಂಕು ಎಂಬುದಾಗಿ ಮಾರ್ಪಾಡಾಯಿತು.

ಅತೀ ಪ್ರಾಚೀನ ಯುಗದಲ್ಲಿಯೇ ಬ್ಯಾಂಕು ಪದ್ಧತಿಯ ಕುರುಹುಗಳನ್ನು ಗುರುತಿಸಬಹುದಾಗಿದೆ. ಪ್ರಾಚೀನ ಕಾಲದಲ್ಲಿ ವ್ಯವಹಾರಿ ಬ್ಯಾಂಕುಗಳು, ಹಣದ

Scanned with CamScanner

ಲೇವಾದೇವಿಗಾರರು ಮತ್ತು ಅಕ್ಕಸಾಲಿಗರು ಕೈಗೊಳ್ಳುತ್ತಿದ್ದ ಹಣದ ವಿನಿಮಯ ಮತ್ತು ಸಾಲ ನೀಡಿಕೆಯ ಕಾರ್ಯಗಳೇ ಇಂದಿನ ಬ್ಯಾಂಕಿಂಗ್ ವ್ಯವಸ್ಥೆಯ ವಿಕಾಸಕ್ಕೆ ಬುನಾದಿಯಾಗಿದೆ. ಪುರಾತನ ಇಟಲಿ, ಗ್ರೀಸ್ ಮತ್ತು ಇಂಗ್ಲೆಂಡ ದೇಶಗಳಲ್ಲಿ ಇವರ ಮುಖ್ಯ ಕಸುಬು ಬೇರೆ ಬೇರೆ ದೇಶಗಳ ನಾಣ್ಯಗಳನ್ನು ವಿನಿಮಯ ಮಾಡುವುದು ಹಾಗೂ ಸಾಲ ನೀಡುವುದಾಗಿತ್ತು.

ಕ್ರಿ.ಪೂ. 2000ದಷ್ಟು ಹಿಂದೆಯೇ ಬ್ಯಾಬಿಲೋನಿಯಾದ ನಾಗರೀಕತೆಯಲ್ಲಿ ಈ ರೀತಿಯಲ್ಲಿ ಬ್ಯಾಂಕು ವ್ಯವಹಾರದ ಪದ್ಧತಿ ಜಾರಿಯಲ್ಲಿತ್ತೆಂದು ನಂಬಲಾಗಿದೆ. ಅನಂತರ ಗ್ರೀಕ್ ನಗರಗಳಲ್ಲಿ ಬ್ಯಾಂಕು ವ್ಯವಹಾರವು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ಇಡೀ ರಾಜ್ಯಕ್ಕೆ ಅನ್ವಯಿಸುವ ಬ್ಯಾಂಕು ಆಗಿನ ಗ್ರೀಕ್ ಸಾಮ್ರಾಜ್ಯದಲ್ಲಿತ್ತೆಂದು ನಂಬಲಾಗಿದೆ.

2. ಬ್ಯಾಂಕಿನ ವ್ಯಾಖ್ಯೆಗಳು (Definition of Bank) :

ಬ್ಯಾಂಕುಗಳು ಸಾಲದ ವ್ಯವಹಾರವನ್ನು ನಡೆಸುವ ಸಂಸ್ಥೆಗಳೆಂದೂ ಹಾಗೂ ಹಣದ ವ್ಯವಹಾರ ಮಾಡುವ ಅಂಗಡಿಗಳು ಎಂದು ಕರೆಯಬಹುದು. ವ್ಯಾಪಾರಸ್ಥರು ವಸ್ತುಗಳನ್ನು ಕೊಂಡು ಮಾಡುವ ವ್ಯವಹಾರದಂತೆ, ಬ್ಯಾಂಕುಗಳು ಹಣದ ವ್ಯವಹಾರ ಮಾಡುತ್ತವೆ. ವಸ್ತುಗಳ ವಿನಿಮಯ ವ್ಯವಹಾರದಲ್ಲಿ ವ್ಯಾಪಾರಸ್ಥರು ಮಧ್ಯಸ್ಥರು ಕಾರ್ಯ ಮಾಡುವಂತೆ ಬ್ಯಾಂಕುಗಳು ಬಂಡವಾಳ ವಿನಿಮಯ ವ್ಯವಹಾರದಲ್ಲಿ ಮಧ್ಯಸ್ಥರ ಕಾರ್ಯ ಮಾಡುತ್ತವೆ. ಬ್ಯಾಂಕಿನ ಪ್ರಮುಖ ವ್ಯಾಖ್ಯೆಗಳು ಕೆಳಗಿನಂತಿವೆ.

ಡಾ. ಎಚ್. ಎಲ್. ಹಾರ್ಟ್ ಅವರು ಬ್ಯಾಂಕರ್ ಎಂಬುದನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ: "ಚಲಾವಣೆ ಖಾತೆಗಳ ಮೇಲೆ ತಾನು ಯಾರಿಂದ ಮತ್ತು ಯಾರ ಪರವಾಗಿ ಹಣವನ್ನು ಸ್ವೀಕರಿಸುತ್ತಾನೋ, ಅಂಥವರು ತಮ್ಮ ಮೇಲೆ ಬರೆದ ಚೆಕ್ಕುಗಳನ್ನು ತನ್ನ ವ್ಯವಹಾರದಲ್ಲಿ ಯಾವನು ಗೌರವಿಸುತ್ತಾನೋ ಅವನೇ ಬ್ಯಾಂಕರ್."

ಪ್ರೊ. ಸೇಯರ್ಸ್ ಅವರ ಅಭಿಪ್ರಾಯದಲ್ಲಿ "ಬ್ಯಾಂಕುಗಳು ಕೇವಲ ಹಣದ ಸರಬರಾಜು ಮಾಡುವುದಿಲ್ಲ. ಅದರೆ ಹಣದ ಉತ್ಪಾದನೆ ಮಾಡುವುದೂ ಅದರ ಕೆಲಸವಾಗಿದೆ."

ಪ್ರೊ. ಕ್ರೌಥರ ಅವರ ಪ್ರಕಾರ, "ಬ್ಯಾಂಕು ಸಾಲ ರೂಪದ ಹಣವನ್ನು ಸೃಷ್ಟಿಸುವ ಒಂದು ಕಾರ್ಖಾನೆ, ತನ್ನ ಮತ್ತು ಇತರ ಜನರ ಸಾಲ-ಸೋಲಗಳಲ್ಲಿ ವ್ಯವಹರಿಸುವ ಸಂಸ್ಥೆಯೇ ಬ್ಯಾಂಕು" ಎಂದು ವ್ಯಾಖ್ಯಾನಿಸಿದ್ದಾರೆ.

ಕ್ರೇರನ್ ಕ್ರೊಸರವರು, "ಬ್ಯಾಂಕು ಸಾಲದ ಮತ್ತು ಉದ್ದರಿ (ಕಡದ) ವ್ಯವಹಾರ ಮಾಡುವ ಒಂದು ಮಧ್ಯವರ್ತಿ ಸಂಸ್ಥೆ" ಎಂದು ವ್ಯಾಖ್ಯಾನಿಸಿದ್ದಾರೆ.

Scanned with CamScanner

ಮೇಲಿನ ಎಲ್ಲಾ ವ್ಯಾಖ್ಯೆಯನ್ನು ಅವಲೋಕಿಸಿದಾಗ, ಸಾಲಪತ್ರಗಳ ವ್ಯವಹಾರ ನಡೆಸುವ, ಜನರಿಂದ ಠೇವಣಿಯನ್ನು ಸ್ವೀಕರಿಸುವ, ಜನರಿಗೆ ಸಾಲ ಕೊಡುವ ವ್ಯಕ್ತಿ ಅಥವಾ ಸಂಸ್ಥೆಗೆ ಬ್ಯಾಂಕು ಎಂದು ಅರ್ಥೈಸಬಹುದಾಗಿದೆ.

2. ಬ್ಯಾಂಕ್ ಪದ್ಧತಿಯ ಮಹತ್ವ (Significance of Banks) :

ಬ್ಯಾಂಕ ಪದ್ಧತಿಯ ಮಹತ್ವವನ್ನು ಕೆಳಗಿನಂತೆ ವಿವರಿಸಲಾಗಿದೆ.

1. **ಬಂಡವಾಳದ ನಿರ್ಮಾಣ (Capital Formation):** ಬಂಡವಾಳದ ನಿರ್ಮಾಣವು ವಿವಿಧ ವರ್ಗದ ಜನರ ಉಳಿತಾಯವನ್ನು ಅವಲಂಭಿಸಿರುತ್ತದೆ. ಬ್ಯಾಂಕು ಜನರು ಉಳಿತಾಯ ಮಾಡುವಂತೆ ಪ್ರೇರೇಪಿಸುತ್ತದೆ. ಇದಕ್ಕಾಗಿ ಹಲವಾರು ಸವಲತ್ತುಗಳನ್ನು ಅದು ನೀಡುತ್ತೆ. ಇದರಿಂದ ಸೋಮಾರಿಯಾದ ಮತ್ತು ಮಲಗಿದ ಬಂಡವಾಳವು ಉತ್ಪಾದನಾ ಉದ್ದೇಶಗಳಿಗೆ ಸಹಾಯಕಾರಿಯಾಗುವಂತೆ ಮಾಡುತ್ತದೆ.

2. **ಪತ್ತು ನಿರ್ಮಾಣ (Credit Creation) :** ಪತ್ತು ನಿರ್ಮಾಣವು ವಾಣಿಜ್ಯ ಬ್ಯಾಂಕಿನ ಪ್ರಮುಖ ಕಾರ್ಯವಾಗಿದೆ. ಇದು ಆರ್ಥಿಕ ದೃಷ್ಟಿಯಿಂದಲೂ ಅತಿ ಮಹತ್ವವಾಗಿದೆ. ಬ್ಯಾಂಕುಗಳು ಪತ್ತು ನಿರ್ಮಾಣ ಮಾಡುವ ಕೈಗಾರಿಕೆಗಳೆಂದು ಕರೆಯುತ್ತಾರೆ. ಇದರಿಂದ ಹೂಡಿಕೆದಾರರಿಗೆ ನೆರವು ನೀಡುತ್ತದೆ.

3. **ಸಂಘಟಿತ ಮತ್ತು ಅಸಂಘಟಿತ ವಲಯದ ಜೋಡಣೆ (Link between Organised and unorganised Sector) :** ಭಾರತದ ಹಣದ ಮಾರುಕಟ್ಟೆಯು ಸಂಘಟಿತ ಮತ್ತು ಅಸಂಘಟಿತ ವಲಯಗಳನ್ನು ಹೊಂದಿದೆ. ಇವೆರಡು ವಲಯಗಳು ಆರ್ಥಿಕಾಭಿವೃದಧಿಗೆ ಅವಶ್ಯಕ. ಅರ್ಥವ್ಯವಸ್ಥೆಯ ನರಮಂಡಲವಾಗಿದ್ದ ಬ್ಯಾಂಕು ಸಂಘಟಿತ ಮತ್ತು ಅಸಂಘಟಿತ ವಲಯಗಳನ್ನು ಆರ್ಥಿಕಾಭಿವೃದ್ಧಿಯ ಸಾಧನೆಗಾಗಿ ಇವೆರಡನ್ನು ಜೋಡಸುತ್ತದೆ.

4. **ದೀರ್ಘಾವಧಿ ಸಾಲಗಳು (Long term Loans) :** ಕೈಗಾರಿಕಾಭಿವೃದ್ಧಿಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ. ಕೈಗಾರಿಕಾಭಿವೃದ್ಧಿಯು ಸಂಪೂರ್ಣವಾಗಿ ದೀರ್ಘಾವಧಿ ಸಾಲವನ್ನು ಅವಲಂಭಿಸಿರುತ್ತದೆ. ಈ ಸಾಲಗಳನ್ನು ಬ್ಯಾಂಕು ನೀಡುತ್ತದೆ.

5. **ಕೃಷಿಗೆ ಸಹಾಯ (Helping to Agriculture) :** ದೇಶದ ಆರ್ಥಿಕಾಭಿವೃದ್ಧಿಯ ಕೇವಲ ಕೈಗಾರಿಕಾಭಿವೃದ್ಧಿಯನ್ನು ಅವಲಂಬಿಸಿರುವುದಲ್ಲ. ಅದು ಕೃಷಿಯನ್ನು ಸಹ ಅವಲಂಭಿಸಿರುತ್ತದೆ. ಕೃಷಿ ವಲಯವು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.

Scanned with CamScanner

25ರಷ್ಟು ಪಾಲು ಸಲ್ಲಿಸುತ್ತದೆ. ಹೀಗಾಗಿ ಬ್ಯಾಂಕು ಕೃಷಿ ವಲಯಕ್ಕೆ ಬಹಳಷ್ಟು ಸಾಲ ಸೌಲಭ್ಯವನ್ನು ಒದಗಿಸುತ್ತದೆ.

6. **ಸಣ್ಣ ಕೈಗಾರಿಕೆಗಳಿಗೆ ಸಹಾಯ (Helping Small Scale Industries) :** ಸಣ್ಣ ಕೈಗಾರಿಕೆಗಳು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತದೆ. ಉದ್ಯೋಗವನ್ನು ಹೆಚ್ಚಿಸುವುದು ಹಾಗೂ ಉತ್ಪಾದನೆಯನ್ನು ಅಧಿಕಗೊಳಿಸುವುದು ಸಣ್ಣ ಕೈಗಾರಿಕೆಗಳ ಮುಖ್ಯ ಉದ್ದೇಶವಾಗಿದೆ. ಈ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಬ್ಯಾಂಕು, ಹಣಕಾಸಿನ ಹಾಗೂ ತಾಂತ್ರಿಕ ನೆರವನ್ನ ಒದಗಿಸುತ್ತದೆ.

7. **ಉದ್ದಿಮೆದಾರರ ಅಭಿವೃದ್ಧಿ (Development of Enterpreneur) :** ಸಾಹಸಿ ಉದ್ದಿಮೆದಾರರ ಬೆಳವಣಿಗೆಗಾಗಿ ಬ್ಯಾಂಕು ಉತ್ತೇಜನ ನೀಡುತ್ತದೆ. ಇವರಿಗಾಗಿ ಹಲವಾರು ಅಭಿವೃದ್ಧಿಯ ಯೋಜನೆಗಳನ್ನು ಕೈಗೊಳ್ಳುತ್ತದೆ. ಈ ಉದ್ದಿಮೆದಾರರು ದೇಶದ ಉತ್ಪನ್ನ ಮತ್ತು ಉದ್ಯೋಗವನ್ನು ಅಧಿಕಗೊಳಿಸುತ್ತಾರೆ.

8. **ಚೆಕ್ ಪದ್ಧತಿ (Cheque System) :** ಬ್ಯಾಂಕು ತನ್ನ ಗ್ರಾಹಕರಿಗೆ ಚೆಕ್ಕುಗಳನ್ನು ಒದಗಿಸುತ್ತದೆ. ಈ ಚೆಕ್‌ಗಳನ್ನು ಅವರು ಮರು ಪಾವತಿಗಾಗಿ ಬಳಸಬಹುದಾಗಿದೆ. ಹೀಗಾಗಿ ಈ ಚೆಕ್‌ಗಳು ವಿನಿಮಯದ ಮಾಧ್ಯಮವನ್ನಾಗಿ ಕಾರ್ಯ ನಿರ್ವಹಿಸುತ್ತದೆ. ಪಾವತಿದಾರರಿಗೆ ಕ್ರಾಸ್ ಮಾಡಿದ ಚೆಕ್ ನೀಡಿದರೆ ಅವರ ಖಾತೆಗೆ ಜಮಾ ಮಾಡುತ್ತದೆ.

9. **ರಾಷ್ಟ್ರೀಯ ಉಳಿತಾ (National Savings) :** ಬ್ಯಾಂಕುಗಳು ಹಲವಾರು ಚಾಲನೆಗಳ ಮೂಲಕ ಜನರ ಉಳಿತಾಯವನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸುತ್ತದೆ. ಈ ಉಳಿತಾಯವು ಉತ್ಪಾದನಾ ಚಟುವಟಿಕೆಗಳಿಗೆ ವೆಚ್ಚ ಮಾಡಲಾಗುತ್ತದೆ.

10. **ಸಮಗ್ರ ಅಧೋರಚನೆಯ ಸೌಕರ್ಯ (Comprehensive Infrastructural Facilities) :** ಬ್ಯಾಂಕುಗಳು ದೇಶದ ಅಧೋರಚನೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಸಾಮಾಜಿಕ, ಶೈಕ್ಷಣಿಕ, ಹಣಕಾಸಿನ ಮತ್ತು ಇತರ ಅಧೋರಚನೆಯನ್ನು ಅಭಿವೃದ್ಧಿಗೊಳಿಸುತ್ತದೆ. ಇದರಿಂದ ದೇಶದ ಆರ್ಥಿಕಾಭಿವೃದ್ಧಿಯಾಗುತ್ತದೆ.

11. **ವ್ಯಾಪಾರ (Trade) :** "ವ್ಯಾಪಾರವು ಆರ್ಥಿಕಾಭಿವೃದ್ಧಿಯ ಇಂಜಿನು" ಎಂದೇ ಹೇಳಲಾಗಿದೆ. ಬ್ಯಾಂಕುಗಳ ದೇಶದ ರಫ್ತು ಹೆಚ್ಚಿಸುವಂತೆ ಕ್ರಮಗಳನ್ನು ಜರುಗಿಸುತ್ತದೆ. ರಫ್ತುದಾರರಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತದೆ. ಇದರಿಂದ ವ್ಯಾಪಾರದ ಕಾರ್ಯಗಳು ದೇಶಕ್ಕೆ ಅನುಕೂಲವಾಗುವಂತೆ ಮಾಡುತ್ತದೆ.

Scanned with CamScanner

12. **ವ್ಯಾಪಾರ ಚಕ್ರದ ಪರಿಣಾಮಗಳನ್ನು ನಿವಾರಿಸುತ್ತದೆ (Mitigating the Effects of Trade Cycles)** : ಹಣದುಬ್ಬರ ಮತ್ತು ಕುಗ್ಗು ಪ್ರಸರಣಗಳನ್ನು ವ್ಯಾಪಾರ ಚಕ್ರಗಳೆಂದು ಕರೆಯುತ್ತಾರೆ. ಇವೆರಡು ನಿಯಂತ್ರಿಸುವುದು ಅವಶ್ಯಕ. ಬ್ಯಾಂಕು ಅವಶ್ಯಕತೆ ಬಿದ್ದಾಗ ಹಣ ದುಬ್ಬರವಾಗಲೀ ಅಥವಾ ಕುಗ್ಗು ಪ್ರಸರಣವಾಗಲೀ ನಿಯಂತ್ರಿಸಿ ಇದರಿಂದ ಉಂಟಾಗುವ ಪರಿಣಾಮಗಳನ್ನು ನಿಯಂತ್ರಿಸುತ್ತದೆ.

13. **ಪ್ರಾದೇಶಿಕ ಅಭಿವೃದ್ಧಿ (Regional Development)** : ಸಂಗ್ರಹಿಸಿದ ಹಣವನ್ನು ಹಿಂದುಳಿದ ಪ್ರದೇಶದ ಅಭಿವೃದ್ಧಿಗಾಗಿ ವಿನಿಯೋಗಿಸಬಹುದಾಗಿದೆ. ಹಿಂದುಳಿದ ಪ್ರಾದೇಶದ ಕೈಗಾರಿಕೆ ಕುಶಲ ಕರ್ಮಗಳಿಗೆ, ಉದ್ದಿಮೆದಾರರಿಗೆ ಸಾಲ ಸೌಲಭ್ಯವನ್ನು ಒದಗಿಸುವುದರಿಂದ ಪ್ರದೇಶಿಕ ಅಭಿವೃದ್ಧಿ ಸಾಧಿಸಬಹುದಾಗಿದೆ.

15. **ಸಾಮಾಜಿಕ ಬದಲಾವಣೆ (Social Change)** : ಬ್ಯಾಂಕುಗಳು ಪ್ರಮುಖ ವಲಯಗಳಾದ ಕೃಷಿ, ಕೈಗಾರಿಕೆ, ವ್ಯಾಪಾರ, ಕುಶಲ ಕಾರ್ಮಿಕ ಮುಂತಾದವರಿಗೆ ಸಾಲ ಸೌಲಭ್ಯಗಳನ್ನು ನೀಡುವುದರಿಂದ ಸಾಮಾಜಿಕ ಬದಲಾವಣೆ ತರಬಹುದಾಗಿದೆ.

16. **ಹಣಕಾಸಿನ ನೀತಿಯ ಅನುಷ್ಠಾನ (Implementation of Monetary Policy)** : ಹಣಕಾಸಿನ ನೀತಿಯನ್ನು ಅನುಷ್ಠಾನಗೊಳಿಸುವ ಮುಖ್ಯ ಸಂಸ್ಥೆಯೇ ಬ್ಯಾಂಕು.

3. ಭಾರತದಲ್ಲಿ ಬ್ಯಾಂಕಿಂಗ್ ವಿಕಾಸ (Evulation of Banks in India)

ಭಾರತದಲ್ಲಿ ಬ್ಯಾಂಕಿಂಗ್ ಹಿಮಾಲದಷ್ಟೆ ಹಳೆಯದು. ಬ್ರಿಟಿಷರು ಭಾರತದಲ್ಲಿ ಬಂದು ಈಸ್ಟ್ ಇಂಡಿಯಾ ಕಂಪನಿ (East India Company) ಯನ್ನು ಸ್ಥಾಪಿಸಿದರು. ಈ ಕಂಪನಿಯು ಭಾರತದಲ್ಲಿ ಬ್ಯಾಂಕುಗಳ ಸ್ಥಾಪನೆಗೆ ಕಾರಣವಾಯಿತು. ಈ East India Company ಭಾರತದಲ್ಲಿ ಮೂರು ಬ್ಯಾಂಕುಗಳನ್ನು ಸ್ಥಾಪಿಸಿತು. ಅವು ಕೆಳಗಿನಂತಿವೆ–

1. ಬ್ಯಾಂಕ್ ಆಫ್ ಬೆಂಗಾಲ – 1809
2. ಬ್ಯಾಂಕ್ ಆಫ್ ಬಾಂಬೆ – 1840
3. ಬ್ಯಾಂಕ್ ಆಫ್ ಮದ್ರಾಸ್ – 1843

ಈ ಬ್ಯಾಂಕುಗಳಿಗೆ ಪ್ರೆಸಿಡೆನ್ಸಿ ಬ್ಯಾಂಕು (Presidency Banks) ಗಳೆಂದು ಕರೆಯುತ್ತಾರೆ. ಇವು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದವು. ನಂತರ ಸ್ವದೇಶಿ ಚಳುವಳಿಯು (Swadeshi Movement) ಭಾರತದಲ್ಲಿ ಬ್ಯಾಂಕುಗಳ ಸ್ಥಾಪನೆಗೆ ಚಾಲನೆಗೆ ನೀಡಿತು. ಉದಾಹರಣೆಗೆ

Scanned with CamScanner

Punjab National Bank Ltd. 1895

Bank of India Ltd. 1906

India Bank Ltd. 1907

Bank of Baroda Ltd. 1908

Central Bank of India Ltd. 1911

ಇದಲ್ಲದೆ ಹಲವಾರು ಬ್ಯಾಂಕುಗಳು ಸ್ಥಾಪನೆಯಾದವು. ಆದರೆ ಪ್ರಥಮ ಜಾಗತಿಕ ಯುದ್ಧದಲ್ಲಿ ಹಲವು ಬ್ಯಾಂಕುಗಳು ದಿವಾಳಿಗಳಾದವು.

1920ರಲ್ಲಿ Imperial Bank of India Act ನ್ನು ಪಾಸು ಮಾಡಿ ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ಒಗ್ಗೂಡಿಸಿ **"Imperial Bank of India"** ಸ್ಥಾಪಿಸಲಾಯಿತು. ನಂತರ ಬ್ಯಾಂಕಿಂಗ್ ವಿಚಾರಣೆ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ ಕಾಯಿದೆಯನ್ನು 1934ರಲ್ಲಿ ಪಾಸು ಮಾಡಿತು. ಇದರನ್ವಯ ಭಾರತೀಯ ರಿಸರ್ವ್ ಬ್ಯಾಂಕು 1935ರಲ್ಲಿ ಸ್ಥಾಪಿಸಲಾಯಿತು. 1955ರಲ್ಲಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾವನ್ನು ರಾಷ್ಟ್ರೀಕರಣಗೊಳಿಸಿ ಭಾರತೀಯ ಸ್ಟೇಟ್ ಬ್ಯಾಂಕ್ ಎಂದು ಸ್ಥಾಪಿಸಲಾಯಿತು. 1955ರಲ್ಲಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದ ರಾಷ್ಟ್ರೀಕರಣದೊಂದಿಗೆ ಕೇಂದ್ರ ಸರ್ಕಾರ ಬ್ಯಾಂಕಿಂಗ್ ವ್ಯವಹಾರವನ್ನು ಪ್ರವೇಶಿಸಿತು. 60% ಪಾಲನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತೆಗೆದುಕೊಂಡಿತು ಮತ್ತು ಹೊಸ ಬ್ಯಾಂಕ್ ಅನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ಹೆಸರಿಸಲಾಯಿತು. 1959ರಲ್ಲಿ ಅಂಗೀಕರಿಸಲ್ಪಟ್ಟಾಗ ಇತರ ಏಳು ರಾಜ್ಯ ಬ್ಯಾಂಕುಗಳು ಹೊಸ ಬ್ಯಾಂಕಿನ ಅಂಗಸಂಸ್ಥೆಗಳಾದವು.

ಬ್ಯಾಂಕಿಂಗ್‌ನಲ್ಲಿ ಸರ್ಕಾರದ ಮುಂದಿನ ಪ್ರಮುಖ ಹಸ್ತಕ್ಷೇಪವು ಜುಲೈ 19ನ 1969ರಂದು ಇಂದಿರಾ ಗಾಂಧಿ ಸರ್ಕಾರವು ಹೆಚ್ಚುವರಿ 14 ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿತು. 1969ರಲ್ಲಿ ರಾಷ್ಟ್ರೀಕರಣ ಗೊಂಡ ಬ್ಯಾಂಕುಗಳಲ್ಲಿನ ಒಟ್ಟು ಠೇವಣಿ 50 ಕೋಟಿಗಳಷ್ಟಿತ್ತು. ಈ ಕ್ರಮವು ಭಾರತದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಉಪಸ್ಥಿತಿಯನ್ನು ಹೆಚ್ಚಿಸಿತು. ಒಟ್ಟು ಶಾಖೆಗಳಲ್ಲಿ 84% ಸರ್ಕಾರದ ನಿಯಂತ್ರಣದಲ್ಲಿದೆ.

ಆರ್ಥಿಕ ಉದಾರೀಕರಣದ ಮೊದಲು (Before Economic Liberalisation):

ಸಾರ್ವಜನಿಕ ಬ್ಯಾಂಕುಗಳು ಹೊಂದಿರುವ ಬ್ಯಾಂಕಿಂಗ್ ಕ್ಷೇತ್ರದ ಪಾಲು 1980ರ ದಶಕದಲ್ಲಿ ಮುಂದುವರಿಯಿತು ಮತ್ತು 1991ರ ಹೊತ್ತಿಗೆ ಸಾರ್ವಜನಿಕ ವಲಯದ ಬ್ಯಾಂಕುಗಳು ಬ್ಯಾಂಕಿಂಗ್ ಕ್ಷೇತ್ರದ 90%ರಷ್ಟನ್ನು ಹೊಂದಿದ್ದವು. ಒಂದು ವರ್ಷದ

Scanned with CamScanner

ನಂತರ, 1992ರ ಮಾರ್ಚ್‌ನಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಒಟ್ಟು ಶಾಖೆಗಳು ಭಾರತದಾದ್ಯಂತ 60. 646 ಆಗಿದ್ದು, ಠೇವಣಿಗಳು 10 1. 10. 000 ಕೋಟಿಗಳಾಗಿವೆ. ಈ ಬ್ಯಾಂಕುಗಳಲ್ಲಿ ಬಹುಪಾಲು ಲಾಭದಾಯಕವಾಗಿದ್ದು, 21 ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಒಂದು ಮಾತ್ರ ನಷ್ಟವನ್ನು ವರದಿ ಮಾಡಿದೆ.

2000 ದಶಕದಲ್ಲಿ ಉದಾರೀಕರಣ (Liberalisation in the 2000s) :

ರಾಷ್ಟ್ರೀಕೃತ ಬ್ಯಾಂಕುಗಳು ಒಟ್ಟು 60 1160 ಕೋಟಿ ನಷ್ಟವನ್ನು ವರದಿ ಮಾಡಿವೆ. ಆದಾಗಿಯೂ, 2000ರ ದಶಕದ ಆರಂಭದಲ್ಲಿ ಈ ಪ್ರವೃತ್ತಿಯು ವ್ಯತಿರಿಕ್ತತೆಯನ್ನು ಕಂಡಿತು. ಅಂದರೆ 2002-03ರಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು 80. 7780 ಕೋಟಿಗಳಷ್ಟು ಲಾಭಗಳಿಸಿದವು; ಈ ಪ್ರವೃತ್ತಿ ದಶಕದುದ್ದಕ್ಕೂ ಮುಂದುವರೆಯಿತು. 2008-2009ರಲ್ಲಿ 85 16856 ಕೋಟಿ ಲಾಭಗಳಿಸಿದವು.

ವಿಲೀನಗಳು (Mergers) :

ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರವನ್ನು ವಿಲೀನಗೊಳಿಸುವ ಮೂಲಕ ಎಸ್‌ಬಿಐ ಸಂಬಂಧಿತ ಬ್ಯಾಂಕುಗಳ ಬಲವರ್ಧನೆಯು ಮೊದಲು ಪ್ರಾರಂಭವಾಯಿತು. ವಿಲೀನವು 13 ಆಗಸ್ಟ್ 2008ರಂದು ಸಂಭವಿಸಿತು. ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂದೋರ್ ಅನ್ನು ಆಗಸ್ಟ್ 27, 2010ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ವಾಧೀನಪಡಿಸಿಕೊಂಡ ನಂತರ ಉಳಿದ 27 ರಾಷ್ಟ್ರೀಕೃತ ಬ್ಯಾಂಕುಗಳನ್ನು 2017-19ರಿಂದ 12 ಬ್ಯಾಂಕುಗಳಾಗಿ ವಿಲೀನಗೊಳಿಸಲಾಯಿತು. ಸ್ಟೇಟ್ ಬ್ಯಾಂಕ್ ಆಫ್ ಬಿಕಾನೆರ್ ಮತ್ತು ಜೈಪುರ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಪಟಿಯಾಲ ಮತ್ತು ಸ್ಟೇಟ್ ಬ್ಯಾಂಕ್ ಆಫ್ ತಿರುವಾಂಕೂರು ಮತ್ತು ಭಾರತೀಯ ಮಹಿಳಾ ಬ್ಯಾಂಕ್ ಅನ್ನು 1 ಏಪ್ರಿಲ್ 2017ರಿಂದ ಜಾರಿಗೆ ಬರುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸಲಾಯಿತು. ವಿಜಯ ಬ್ಯಾಂಕ್ ಮತ್ತು ದೇನಾ ಬ್ಯಾಂಕ್ ಅನ್ನು 2018ರಲ್ಲಿ ಬ್ಯಾಂಕ್ ಆಫ್ ಬರೋಡಾದಲ್ಲಿ ವಿಲೀನಗೊಳಿಸಲಾಯಿತು. ಅಲಹಾಬಾದ್ ಬ್ಯಾಂಕ್ ಅನ್ನು ಜನವರಿ 2019ರಿಂದ ಜಾರಿಗೆ ಬರುವಂತೆ ಐಸಿಐ ಬ್ಯಾಂಕ್ ಎಂದು ಮರ್ಗೀಕರಿಸಲಾಗಿದೆ.

30 ಆಗಸ್ಟ್ 2019ರಂದು, ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಮತ್ತಷ್ಟು ಬಲಪಡಿಸುವ ಸರ್ಕಾರದ ಯೋಜನೆಯನ್ನು ಪ್ರಕಟಿಸಿತು. ಇಂಡಿಯನ್ ಬ್ಯಾಂಕ್ ಅನ್ನು ಅಲಹಾಬಾದ್ ಬ್ಯಾಂಕ್ (ಅಂಕರ್ ಬ್ಯಾಂಕ್- ಇಂಡಿಯನ್ ಬ್ಯಾಂಕ್) ನೊಂದಿಗೆ ವಿಲೀನಗೊಳಿಸಲಾಗುವುದು; ಪಿಎನ್‌ಬಿ, ಒಬಿಸಿ ಮತ್ತು ಯುನೈಟೆಡ್ ಬ್ಯಾಂಕ್ ಅನ್ನು ವಿಲೀನಗೊಳಿಸಬೇಕು (ಅಂಕರ್

Scanned with CamScanner

ಬ್ಯಾಂಕ್ – ಪಿಎನ್‌ಬಿ); ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಆಂಧ್ರ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್ ಅನ್ನು ವಿಲೀನಗೊಳಿಸಬೇಕಾಗಿದೆ (ಅಂಕರ್ ಬ್ಯಾಂಕ್ – ಯೂನಿಯನ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ); ಮತ್ತು ಕೆನರಾಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್ ಅನ್ನು ವಿಲೀನಗೊಳಿಸಬೇಕು (ಅಂಕರ್ ಬ್ಯಾಂಕ್ – ಕೆನರಾಬ್ಯಾಂಕ್)

ರಾಷ್ಟ್ರೀಕೃತ ಬ್ಯಾಂಕುಗಳು (Nationalised banks)

ಸಾರ್ವಜನಿಕ ವಲಯದ ಬ್ಯಾಂಕುಗಳು (ಸರ್ಕಾರಿ ಷೇರುದಾರರ % ಏಪ್ರಿಲ್ 1, 2019ರಂತೆ)

1. ಬ್ಯಾಂಕ್ ಆಫ್ ಬರೋಡಾ (63.74%)
2. ಬ್ಯಾಂಕ್ ಆಫ್ ಇಂಡಿಯಾ (87.0535%)
3. ಬ್ಯಾಂಕ್ ಆಫ್ ಮಹಾರಾಷ್ಟ್ರ (87.01%)
4. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ (88.02%)
5. ಭಾರತೀಯ ಸಾಗರೋತ್ತರ ಬ್ಯಾಂಕ್ (91%)
6. ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ (79.62%)
7. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (61.00%)
8. ಯುಕೋ ಬ್ಯಾಂಕ್ (93.29%)

ವಿಲೀನಗೊಳ್ಳುತ್ತಿದೆ (1 ಏಪ್ರಿಲ್ '20' ರಿಂದ ಕಾರ್ಯಕಾರಿ)

1. ಕೆನರಾ ಬ್ಯಾಂಕ್ (72.55%) – ಸಿಂಡಿಕೇಟ್ ಬ್ಯಾಂಕ್ (81.23%)
2. ಇಂಡಿಯನ್ ಬ್ಯಾಂಕ್ (81.73%) – ಅಲಹಾಬಾದ್ ಬ್ಯಾಂಕ್ (79.41%)
3. ಪಂಜಾಬ್ ನ್ಯಾಷನಲ್ ಬ್ಯಾಂಕ್ (70.22%) – ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ (77.23%) – ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ (92.25%)
4. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (67.43%) – ಆಂಧ್ರ ಬ್ಯಾಂಕ್ (84.83%)– ಕಾರ್ಪೊರೇಶನ್ ಬ್ಯಾಂಕ್ (84.96%)

ಪಾವತಿ ಬ್ಯಾಂಕ್ (ಪಿಬಿ)

Scanned with CamScanner

ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (IPPB) (100%)

ಭಾರತದ ಖಾಸಗಿ ವಲಯದ ಬ್ಯಾಂಕುಗಳು ಬಹುಪಾಲು ಷೇರುಗಳು ಅಥವಾ ಷೇರುಗಳನ್ನು ಸರ್ಕಾರದಿಂದ ಹೊಂದಿಲ್ಲ ಆದರೆ ಖಾಸಗಿ ಷೇರುದಾರರಿಂದ ಹೊಂದಿರುವ ಬ್ಯಾಂಕುಗಳಾಗಿವೆ.

1969ರಲ್ಲಿ ಎಲ್ಲಾ ಪ್ರಮುಖ ಬ್ಯಾಂಕುಗಳನ್ನು ಭಾರತ ಸರ್ಕಾರ ರಾಷ್ಟ್ರೀಕರಣಗೊಳಿಸಿತು. ಆದಾಗ್ಯೂ, 1990ರ ದಶಕದಲ್ಲಿ ಸರ್ಕಾರದ ನೀತಿಯಲ್ಲಿ ಬದಲಾವಣೆಯಾದ ನಂತರ, ಹಳೆಯ ಮತ್ತು ಹೊಸ ಖಾಸಗಿ ವಲದಯ ಬ್ಯಾಂಕುಗಳು ಮತ್ತೆ ಹುಟ್ಟಿಕೊಂಡಿವೆ. ಖಾಸಗಿ ವಲಯದ ಬ್ಯಾಂಕುಗಳನ್ನು ಭಾರತದಲ್ಲಿ ಹಣಕಾಸು ನಿಯಂತ್ರಕರು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ, ಹಳೆಯ ಮತ್ತು ಹೊಸದು. ಹಳೆಯ ಖಾಸಗಿ ವಲಯದ ಬ್ಯಾಂಕುಗಳು 1969ರಲ್ಲಿ ರಾಷ್ಟ್ರೀಕರಣದಲ್ಲಿ ಸೇರ್ಪಡೆಗೊಳ್ಳಲು ತುಂಬಾ ಚಿಕ್ಕದಾಗಿದೆ ಹೊಸ ಖಾಸಗಿ ವಲಯದ ಬ್ಯಾಂಕುಗಳು 1990ರ ದಶಕದಲ್ಲಿ ನೀತಿಯ ಬದಲಾವಣೆಯ ನಂತರ ತಮ್ಮ ಬ್ಯಾಂಕಿಂಗ್ ಪರವಾನಗಿಯನ್ನು ಪಡೆದಿವೆ.

ನೆಡುಂಗಡಿ ಬ್ಯಾಂಕ್ ಭಾರತದ ಮೊದಲ ಖಾಸಗಿ ವಲಯದ ಬ್ಯಾಂಕ್ ಆಗಿದ್ದು. ಇದನ್ನು 1899ರಲ್ಲಿ ರಾವ್ ಬಹದ್ದೂರ್ ಟಿ. ಎಂ. ಕೇರಳದ ಕೋಜಿಕೋಡ್‌ನಲ್ಲಿ ಅಪ್ಪು ನೆಡುಂಗಡಿ ಎಂಬುವರು ಸ್ಥಾಪಿಸಿದ್ದಾರೆ.

1968ಕ್ಕಿಂತ ಮೊದಲು ಸ್ಥಾಪನೆಗೊಂಡ ಖಾಸಗಿ ವಲಯದ ಬ್ಯಾಂಕುಗಳು

ಹೆಸರು	ಸ್ಥಾಪಿಸಲಾದ ವರ್ಷ
ಐಡಿಬಿಐ ಬ್ಯಾಂಕ್	1964
ಸಿಟಿ ಯೂನಿಯನ್ ಬ್ಯಾಂಕ್	1904
ಕರೂರ್ ವೈಶ್ಯ ಬ್ಯಾಂಕ್	1916
ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್	1920
ತಮಿಳುನಾಡ್ ಮರ್ಕೆಂಟೈಲ್ ಬ್ಯಾಂಕ್	1921
ನೈನಿತಾಲ್ ಬ್ಯಾಂಕ್	1922
ಕರ್ನಾಟಕ ಬ್ಯಾಂಕ್	1924
ಲಕ್ಷ್ಮಿ ವಿಲಾಸ್ ಬ್ಯಾಂಕ್	1926

Scanned with CamScanner

ಧನಲಕ್ಷ್ಮಿ ಬ್ಯಾಂಕ್	1927
ದಕ್ಷಿಣ ಭಾರತೀಯ ಬ್ಯಾಂಕ್	1929
ಡಿಸಿಬಿ ಬ್ಯಾಂಕ್	1930
ಫೆಡರಲ್ ಬ್ಯಾಂಕ್	1931
ಜಮ್ಮು ಮ್ತು ಕಾಶ್ಮೀರ ಬ್ಯಾಂಕ್	1938
ಆರ್ಬಿಎಲ್ ಬ್ಯಾಂಕ್	1943

1968ರ ನಂತರ ಸ್ಥಾಪನೆಯಾದ ಖಾಸಗಿ ವಲಯದ ಬ್ಯಾಂಕುಗಳು

ಹೆಸರು	ಸ್ಥಾಪಿಸಲಾದ ವರ್ಷ
ಐಸಿಐಸಿಐ ಬ್ಯಾಂಕ್	1994
ಆಕ್ಸಿಸ್ ಬ್ಯಾಂಕ್	1993
ಎಚ್‌ಡಿಎಫ್‌ಸಿ ಬ್ಯಾಂಕ್	1994
ಕೊಟಕ್ ಮಹೀಂದ್ರಾ ಬ್ಯಾಂಕ್	2003
ಹೌದು ಬ್ಯಾಂಕ್	2004
ಇಂಡಸ್‌ಇಂಡ್ ಬ್ಯಾಂಕ್	1994
ಐಡಿಎಫ್‌ಸಿ ಮೊದಲ ಬ್ಯಾಂಕ್	2015
ಬಂಧನ್ ಬ್ಯಾಂಕ್	2015

ಉದಾರೀಕರಣದ ನಂತರ, ಖಾಸಗಿ ವಲಯದ ಬ್ಯಾಂಕುಗಳ ಹೊರಹೊಮ್ಮುವಿಕೆಯಿಂದಾಗಿ ಬ್ಯಾಂಕಿಂಗ್ ಕ್ಷೇತ್ರವು ತೀವ್ರ ಬದಲಾವಣೆಯನ್ನು ಹೊಂದಿದೆ. ಏಕೆಂದರೆ ಅವುಗಳ ಉಪಸ್ಥಿತಿಯು ನಿರಂತರವಾಗಿ ಹೆಚ್ಚುತ್ತಲೇ ಇದೆ. ತಮ್ಮ ಗ್ರಾಹಕರಿಗೆ ವೈವಿಧ್ಯಮಯ ಉತ್ಪನ್ನಗಳು ಮತ್ತು ಸೇವೆಗಳನ್ನು ನೀಡುತ್ತದೆ. ಅವರು ಆರ್ಥಿಕತೆಯಲ್ಲಿ ತೀವ್ರ ಸ್ಪರ್ಧೆಯನ್ನು ಒಡ್ಡಿದ್ದರು.

Scanned with CamScanner

4. ಭಾರತದ ಬ್ಯಾಂಕಿಂಗ್ ವ್ಯವಸ್ಥೆಯ ರಚನೆ (Composition of Indian Banking System) :

1. ಪೀಠಿಕೆ:

ಇಂದು ಜಗತ್ತು ವೈಶಿಷ್ಟ್ಯ (Specialisation) ಮಯವಾಗಿದೆ. ಉತ್ಪಾದನಾ ಕ್ಷೇತ್ರದಲ್ಲಿ ಶ್ರಮ ವಿಭಜನೆಯಿಂದ ಇದು ಸಾಧ್ಯವಾಗಿದೆ. ಹಾಗೆಯೇ ಸೇವಾ ಕ್ಷೇತ್ರದಲ್ಲಿ ವೈಶಿಷ್ಟ್ಯತೆಯನ್ನು ಹೊಂದಿದೆ. ಇವುಗಳಲ್ಲಿ ಬ್ಯಾಂಕು ವಲಯವು ಸಹ ಒಂದಾಗಿದೆ. ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ವಿವಿಧ ಬ್ಯಾಂಕುಗಳು ಹುಟ್ಟಿಕೊಂಡಿವೆ. ದೇಶದ ಪ್ರಮುಖ ಬ್ಯಾಂಕುಗಳನ್ನು ಕೆಳಗಿನಂತೆ ವರ್ಗೀಕರಿಸಲಾಗಿದೆ.

1. ಕೇಂದ್ರ ಬ್ಯಾಂಕುಗಳು.
2. ವಾಣಿಜ್ಯ ಬ್ಯಾಂಕುಗಳು.
3. ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು.
4. ಸಹಕಾರಿ ಬ್ಯಾಂಕುಗಳು.
5. ವಿನಿಮಯ ಬ್ಯಾಂಕುಗಳು.
6. ಭೂ ಅಡಮಾನ ಬ್ಯಾಂಕುಗಳು.
7. ಅಂತರರಾಷ್ಟ್ರೀಯ ಬ್ಯಾಂಕುಗಳು.

ಒಂದು ಬ್ಯಾಂಕು, ಎಲ್ಲ ಪ್ರಕಾರದ ಸಾಮಾನ್ಯ ಬ್ಯಾಂಕಿನ ವ್ಯವಹಾರಗಳನ್ನು ನಡೆಸುತ್ತಿದ್ದರೆ ಅದನ್ನು ವಾಣಿಜ್ಯ ಬ್ಯಾಂಕುಗಳೆಂದು ಕರೆಯುತ್ತಾರೆ. ಇದಲ್ಲದೆ ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆಗಳಿಗೆ ಸಾಲವನ್ನು ಒದಗಿಸುತ್ತದೆ. ಸಾರ್ವಜನಿಕರಿಂದ ಠೇವಣಿಯನ್ನು ಸ್ವೀಕರಿಸುತ್ತದೆ. ಸಾಲ ಮುಂಗಡಗಳನ್ನು ಒದಗಿಸುತ್ತದೆ.

ಬ್ಯಾಂಕಿನ ರಚನೆಯ ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತದೆ. ಅದು ಆರ್ಥಿಕ, ರಾಜಕೀಯ ಮತ್ತು ಹಣಕಾಸಿನ ಪದ್ಧತಿಯನ್ನು ಅವಲಂಭಿಸಿರುತ್ತದೆ. ಬ್ಯಾಂಕುಗಳನ್ನು ಅವುಗಳ ವ್ಯವಹಾರ ಪದ್ಧತಿ, ಕಾರ್ಯಕ್ಷೇತ್ರಗಳ ಆಧಾರದ ಮೇಲೆ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ. ಇವುಗಳಿಗೆ ಬ್ಯಾಂಕಿಂಗ್ ಪದ್ಧತಿ ಎಂದು ಕರೆಯುತ್ತಾರೆ. ಉದಾ : ಏಕ ಬ್ಯಾಂಕಿಂಗ್, ಕವಲು ಬ್ಯಾಂಕಿಂಗ್, ಸರಪಳಿ ಬ್ಯಾಂಕಿಂಗ್, ಮಿಶ್ರ ಬ್ಯಾಂಕಿಂಗ್, ಪ್ರಾದೇಶಿಕ ಬ್ಯಾಂಕಿಂಗ್ ಇತ್ಯಾದಿ.

ವಾಣಿಜ್ಯ ಬ್ಯಾಂಕುಗಳು ದೇಶದ ತುಂಬೆಲ್ಲಾ ತನ್ನ ಶಾಖೆಗಳನ್ನು ಹೊಂದಿದ್ದು ಬ್ಯಾಂಕಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತದೆ. ಭಾರತದಲ್ಲಿ ವಾಣಿಜ್ಯ

Scanned with CamScanner

ಬ್ಯಾಂಕುಗಳ ರಚನೆಯು ಇಂಗ್ಲೆಂಡ ದೇಶದ ವಾಣಿಜ್ಯ ಬ್ಯಾಂಕಿನ ರಚನೆಯನ್ನು ಅಧ್ಯಯಿಸಿದೆ. ದೇಶದಲ್ಲಿ ಸಾಕಷ್ಟು ಶಾಖೆಗಳನ್ನು ಹೊಂದಿದೆ. ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಗಳನ್ನು ಕೂಡಿಸಿದರೆ ಸುಮಾರು 60,000 ಶಾಖೆಗಳವೆ ಬ್ಯಾಂಕಿನ ಶಾಖೆಯನ್ನು ತೆಗೆಯಬೇಕಾದರೆ, ಇಲ್ಲವೆ ಹೊಸ ಬ್ಯಾಂಕನ್ನು ಪ್ರಾರಂಭಿಸಬೇಕಾದರೆ ಭಾರತೀಯ ರಿಝರ್ವ್ ಬ್ಯಾಂಕಿನಿಂದ ಪರವಾನಿಗೆ ಪಡೆಯಬೇಕಾಗುತ್ತದೆ.

ಶಾಖಾ ಬ್ಯಾಂಕಿನ ಸಂಘಟನಾತ್ಮಕ ರಚನೆ

ಮುಖ್ಯ ಕಛೇರಿ (Head Office)

↓

ವಲಯ ಕಚೇರಿಗಳು (Zonal Office)

↓

ಪ್ರಾದೇಶಿಕ ಕಚೇರಿಗಳು (Regional Office)

↓

ವಿಭಾಗೀಯ (ಜಿಲ್ಲಾ) ಕಚೇರಿಗಳು (Divisional (Division) Offices)

↓

ಶಾಖೆಗಳು

ಇದನ್ನು ಬೇರೆ ರೀತಿಯಿಂದಲೂ ತೋರಿಸಬಹುದಾಗಿದೆ.

↓

ವಲಯ ಕಚೇರಿ I ಅಥವಾ ಪೂರ್ವ	ವಲಯ ಕಚೇರಿ II ಅಥವಾ ಪಶ್ಚಿಮ	ವಲಯ ಕಚೇರಿ III ಅಥವಾ ಉತ್ತರ	ವಲಯ ಕಚೇರಿ IV ಅಥವಾ ದಕ್ಷಿಣ
↓	↓	↓	↓
ಪ್ರಾದೇಶಿಕ ಕಚೇರಿಗಳು	ಪ್ರಾದೇಶಿಕ ಕಚೇರಿಗಳು	ಪ್ರಾದೇಶಿಕ ಕಚೇರಿಗಳು	ಪ್ರಾದೇಶಿಕ ಕಚೇರಿಗಳು

Scanned with CamScanner

ಭಾರತದಲ್ಲಿ ಶೆಡ್ಯೂಲ್ಡ್ ಬ್ಯಾಂಕಿನ ರಚನೆ (Scheduled Banking Structure in India)



1. ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ (Reserve Bank of India) :

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನಮ್ಮ ದೇಶದ ಸೆಂಟ್ರಲ್ ಬ್ಯಾಂಕ್ ಆಗಿದೆ. ಇದನ್ನು 1934ರ ಆರ್‌ಬಿಐ ಕಾಯ್ದೆಯಡಿ ಏಪ್ರಿಲ್ 1, 1935ರಂದು ಸ್ಥಾಪಿಸಲಾಯಿತು. ಇದು ಬ್ಯಾಂಕಿಂಗ್ ರಚನೆಯಲ್ಲಿ ಅತ್ಯುನ್ನತ ಸ್ಥಾನವನ್ನು ಹೊಂದಿದೆ. ಆರ್‌ಬಿಐ ವಿವಿಧ ಅಭಿವೃದ್ಧಿ ಮತ್ತು ಪ್ರಚಾರ ಕಾರ್ಯಗಳನ್ನು ನಿರ್ವಹಿಸುತ್ತದೆ.

ಬ್ಯಾಂಕಿಂಗ್ ರಚನೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ನಿಯಂತ್ರಿಸಲು ಇದು ಅಧಿಕಾರವನ್ನು ಹೊಂದಿದೆ. ಇದು ದೇಶದ ವಿತ್ತೀಯ ಮತ್ತು ಬ್ಯಾಂಕಿಂಗ್ ರಚನೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಅನೇಕ ದೇಶಗಳಲ್ಲಿ ಸೆಂಟ್ರಲ್ ಬ್ಯಾಂಕ್ ಅನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ.

ಉದಾಹರಣೆಗೆ, ಅಮೇರಿಕಾದಲ್ಲಿ ಫೆಡರಲ್ ರಿಸರ್ವ್ ಬ್ಯಾಂಕ್, ಇಂಗ್ಲೆಂಡಿನಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಭಾರತದ ರಿಸರ್ವ್ ಬ್ಯಾಂಕು, ಸೆಂಟ್ರಲ್ ಬ್ಯಾಂಕ್ ಅನ್ನು ಬ್ಯಾಂಕರ್ ಬ್ಯಾಂಕ್ ಎಂದು ಸಹ ಕರೆಯಲಾಗುತ್ತದೆ. ವಿತ್ತೀಯ ಮತ್ತು ಸಾಲ ನೀತಿಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಇದಕ್ಕೆ ಅಧಿಕಾರವಿದೆ. ಇದು ಒಂದು ದೇಶದ ಸರ್ಕಾರದ ಒಡೆತನದಲ್ಲಿ ಮತ್ತು ನೋಟುಗಳನ್ನು ಮುದ್ರಿಸುವ ಏಕಸ್ವಾಮ್ಯ ಅಧಿಕಾರವನ್ನು ಹೊಂದಿದೆ.

Scanned with CamScanner

2. ವಾಣಿಜ್ಯ ಬ್ಯಾಂಕುಗಳು (Commercial Banks) :

ವಾಣಿಜ್ಯ ಬ್ಯಾಂಕ್ ಎನ್ನುವುದು ಠೇವಣಿಯನ್ನು ಸ್ವೀಕರಿಸುವ, ವ್ಯವಹಾರ ಸಾಲಗಳನ್ನು ನೀಡುವ ಮತ್ತು ಸಾಮಾನ್ಯ ಗ್ರಾಹಕರಿಗೆ ಮತ್ತು ಉದ್ಯಮಿಗಳಿಗೆ ಸಾಲ ಮತ್ತು ಮುಂಗಡಗಳನ್ನು ನೀಡುವಂತಹ ವಿವಿಧ ಸೇವೆಗಳನ್ನು ಒದಗಿಸುವ ಹಣಕಾಸಿನ ಸಂಸ್ಥೆ.

ಈ ಸಂಸ್ಥೆಗಳು ಲಾಭಗಳಿಸುತ್ತವೆ. ಈ ಬ್ಯಾಂಕುಗಳು ಕೈಗಾರಿಕೆಗಳಿಗೆ ಮತ್ತು ಕೃಷಿ, ಗ್ರಾಮೀಣಾಭಿವೃದ್ಧಿ ಮುಂತಾದ ವಿವಿಧ ಕ್ಷೇತ್ರದ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುತ್ತವೆ. ಇದು ಲಾಭದಾಯಕ ಸಂಸ್ಥೆಯಾಗಿದ್ದು, ಇದು ಸರ್ಕಾರಿ ಅಥವಾ ಖಾಸಗಿ ಒಡೆತನದಲ್ಲಿದೆ.

ವಾಣಿಜ್ಯ ಬ್ಯಾಂಕ್ ಸಾರ್ವಜನಿಕ ವಲಯ, ಖಾಸಗಿ ವಲಯ, ವಿದೇಶಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಒಳಗೊಂಡಿದೆ:

a. ಸಾರ್ವಜನಿಕ ವಲಯದ ಬ್ಯಾಂಕುಗಳು (Public Sector Banks) :

ಇದರಲ್ಲಿ ಎಸ್‌ಬಿಐನ, ಏಳು (7) ಸಹಾಯಕ ಬ್ಯಾಂಕುಗಳು ಮತ್ತು ಹತ್ತೊಂಬತ್ತು (19) ರಾಷ್ಟ್ರೀಕೃತ ಬ್ಯಾಂಕುಗಳು ಸೇರಿವೆ. ಒಟ್ಟಾರೆಯಾಗಿ 27 ಸಾರ್ವಜನಿಕ ವಲಯದ ಬ್ಯಾಂಕುಗಳಿವೆ. ಭಾರತದ ಒಟ್ಟು ಬ್ಯಾಂಕಿಂಗ್ ವ್ಯವಹಾರದಲ್ಲಿ ಸಾರ್ವಜನಿಕ ವಲಯವು 90 ಪ್ರತಿಶತದಷ್ಟು ಪಾಲನ್ನು ಹೊಂದಿದೆ ಮತ್ತು ಎಲ್ಲಾ ವಾಣಿಜ್ಯ ಬ್ಯಾಂಕುಗಳ ಪರಿಮಾಣದ ಪ್ರಕಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅತಿದೊಡ್ಡ ವಾಣಿಜ್ಯ ಬ್ಯಾಂಕ್ ಆಗಿದೆ.

b. ಖಾಸಗಿ ವಲಯದ ಬ್ಯಾಂಕುಗಳು (Private Sector Banks):

ಖಾಸಗಿ ವಲಯದ ಬ್ಯಾಂಕುಗಳು ಖಾಸಗಿ ಷೇರುದಾರಿಂದ ಷೇರುಗಳನ್ನು ಹೊಂದಿರುತ್ತವೆ. ಉದಾಹರಣೆಗೆ, ಐಸಿಐಸಿಐ, ಹೆಚ್‌ಡಿಎಫ್‌ಸಿ (ICICI, HDFC) ಇತ್ಯಾದಿ. ಭಾರತೀಯ ಬ್ಯಾಂಕಿಂಗ್ ಉದ್ಯಮದ ಅಭಿವೃದ್ಧಿಯಲ್ಲಿ ಖಾಸಗಿ ವಲಯದ ಬ್ಯಾಂಕ್ ಪ್ರಮುಖ ಪಾತ್ರವಹಿಸುತ್ತದೆ.

c. ವಿದೇಶಿ ಬ್ಯಾಂಕುಗಳು (Foreign Banks) :

ವಿದೇಶಿ ಬ್ಯಾಂಕುಗಳು ವಿದೇಶಗಳಲ್ಲಿ ಮುಖ್ಯ ಕಚೇರಿಗಳನ್ನು ಹೊಂದಿರುವ ಬ್ಯಾಂಕುಗಳಾಗಿವೆ. ಸಿಐಟಿಐ ಬ್ಯಾಂಕ್, (citi bank) ಎಚ್‌ಎಸ್‌ಬಿಸಿ, (HSBC) ಸ್ಟ್ಯಾಂಡರ್ಡ್ ಚಾರ್ಟರ್ಡ್ ಇತ್ಯಾದಿಗಳು ಭಾರತದ ವಿದೇಶಿ ಬ್ಯಾಂಕಿನ ಉದಾಹರಣೆಗಳಾಗಿವೆ.

d. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (Regional Rural Banks - RRBS) :

ಇವು ರಾಜ್ಯ ಪ್ರಯೋಜಿತ ಪ್ರಾದೇಶಿಕ ಗ್ರಾಮೀಣ ಆಧಾರಿತ ಬ್ಯಾಂಕುಗಳಾಗಿವೆ. ಅವರು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಮನ್ನಣೆ ನೀಡುತ್ತಾರೆ. ಗ್ರಾಮೀಣ ಪ್ರಾದೇಶಿಕ

Scanned with CamScanner

ಗ್ರಾಮೀಣ ಬ್ಯಾಂಕ್ ಮುಖ್ಯ ಉದ್ದೇಶ ಗ್ರಾಮೀಣ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವುದು. ಅವರ ಸಾಲಗಾರರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಕುಶಲಕರ್ಮಿಗಳು ಸೇರಿದ್ದಾರೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ನಬಾರ್ಡ್ ಉನ್ನತ ಸ್ಥಾನವನ್ನು ಹೊಂದಿದೆ.

3. ಶೆಡ್ಯೂಲ್ಡ ಮತ್ತು ನಾನ್ ಶೆಡ್ಯೂಲ್ಡ ಬ್ಯಾಂಕುಗಳು (Scheduled & Non Scheduled Banks) :

ಶೆಡ್ಯೂಲ್ಡ್ ಬ್ಯಾಂಕುಗಳು ಆರ್‌ಬಿಐ ಕಾಯ್ದೆ, 1934ರ ಎರಡನೇ ವೇಳಾಪಟ್ಟಿಯಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಈ ಬ್ಯಾಂಕುಗಳು ಒಟ್ಟು ಮೌಲ್ಯದ ರೂ. 5ಲಕ್ಷ, ಪಾವತಿಸಿದ ಬಂಡವಾಳವನ್ನು ಹೊಂದಿದ್ದು, ತಮ್ಮ ವ್ಯವಹಾರಗಳನ್ನು ತಮ್ಮ ಠೇವಣಿದಾರರ ಹಿತದೃಷ್ಟಿಯಿಂದ ನಡೆಸಲಾಗುತ್ತದೆ ಎಂದು ಆರ್‌ಬಿಐಗೆ ತೃಪ್ತಿಪಡಿಸಬೇಕು.

ಎಲ್ಲಾ ವಾಣಿಜ್ಯ ಬ್ಯಾಂಕುಗಳು (ಭಾರತೀಯ ಮತ್ತು ವಿದೇಶಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳು ಶೆಡ್ಯೂಲ್ಡ್ ಬ್ಯಾಂಕುಗಳಾಗಿವೆ. ಆರ್‌ಬಿಐ ಕಾಯ್ದೆ, 1934ರ ಎರಡನೇ ವೇಳಾಪಟ್ಟಿಯಲ್ಲಿ ಸೇರಿಸಲಾಗಿಲ್ಲದ ಬ್ಯಾಂಕುಗಳಿಗೆ ನಾನ್ ಶೆಡ್ಯೂಲ್ಡ್ ಬ್ಯಾಂಕುಗಳೆನ್ನುತ್ತಾರೆ. ಪ್ರಸ್ತುತ ಇವು ದೇಶದಲ್ಲಿ ಕೇವಲ ಮೂರು ಬ್ಯಾಂಕುಗಳಾಗಿವೆ.

4. ಅಭಿವೃದ್ಧಿ ಬ್ಯಾಂಕುಗಳು (Development Banks) :

ಅಭಿವೃದ್ಧಿ ಬ್ಯಾಂಕ್ ಒಂದು ಹಣಕಾಸು ಸಂಸ್ಥೆಯಾಗಿದ್ದು, ಇದು ಅಭಿವೃದ್ಧಿ ಉದ್ದೇಶಗಳಿಗಾಗಿ ಕೈಗಾರಿಕೆಗಳಿಗೆ ದೀರ್ಘಾವಧಿಯ ಸಾಲವನ್ನೂ ಒದಗಿಸುತ್ತದೆ. ಈ ಸಂಸ್ಥೆಯು ಐಡಿಬಿಐ, ಐಸಿಐಸಿಐ, ಐಎಫ್‌ಸಿಐ ಮುಂತಾದ ಬ್ಯಾಂಕುಗಳನ್ನು ಒಳಗೊಂಡಿದೆ. ಎಸ್‌ಎಫ್‌ಸಿಯ ಎಸ್‌ಐಡಿಸಿ ಯಂತಹ ರಾಜ್ಯ ಮಟ್ಟದ ಸಂಸ್ಥೆಗಳು ಇತ್ಯಾದಿ. ಇದು ಯುಟಿಐ, ಎಲ್‌ಐಸಿ, ಮತ್ತು ಜಿಐಸಿ (WTI, LIC, GIC) ಮುಂತಾದ ಹೂಡಿಕೆ ಸಂಸ್ಥೆಗಳನ್ನೂ ಒಳಗೊಂಡಿದೆ.

5. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (Regional Rural Banks) :

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (RRBS) ಹೊಸ ಸ್ವರೂಪದ ಬ್ಯಾಂಕುಗಳಾಗಿವೆ. ಇವು 1970ರ ದಶಕದ ಮಧ್ಯಭಾಗದಲ್ಲಿ (ವೈಯಕ್ತಿಕ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಿಂದ ಪ್ರಾಯೋಜಿಸಲ್ಪಟ್ಟವು) ಅಸ್ತಿತ್ವಕ್ಕೆ ಬಂದವು. ಗ್ರಾಮೀಣ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೃಷಿ ಮತ್ತು ಇತರ ಉತ್ಪಾದಕ ಚಟುವಟಿಕೆಗಳಿಗೆ ಸಾಲ ಮತ್ತು ಠೇವಣಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟಿವೆ.

Scanned with CamScanner

ಸಣ್ಣ ಮತ್ತು ಅತೀ ಸಣ್ಣ ರೈತರು, ಕೃಷಿ ಕಾರ್ಮಿಕರು, ಗ್ರಾಮೀಣ ಕುಶಲಕರ್ಮಿಗಳು ಮತ್ತು ಗ್ರಾಮೀಣ ಪ್ರದೇಶದ ಇತರ ಸಣ್ಣ ಉದ್ಯಮಿಗಳಿಗೆ ಇಂತಹ ಸೌಲಭ್ಯಗಳನ್ನು ಒದಗಿಸಲು ಒತ್ತು ನೀಡಲಾಗಿದೆ.

ಈ ಬ್ಯಾಂಕುಗಳ ಇತರ ವಿಶೇಷ ಲಕ್ಷಣಗಳು (Other Special Functions of the Bank) :

i) ಅವರ ಕಾರ್ಯಾಚರಣೆಯ ಪ್ರದೇಶವು ಯಾವುದೇ ರಾಜ್ಯದ ಒಂದು ಅಥವಾ ಹೆಚ್ಚಿನ ಜಿಲ್ಲೆಗಳನ್ನು ಒಳಗೊಂಡ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿದೆ;

ii) ಇದರ ಸಾಲ ದರಗಳು ಯಾವುದೇ ನಿರ್ದಿಷ್ಟ ರಾಜ್ಯದಲ್ಲಿ ಸಹಕಾರಿ ಸಾಲ ಸಂಘಗಳ ಚಾಲ್ತಿಯಲ್ಲಿರುವ ಸಾಲ ದರಗಳಿಗಿಂತ ಹೆಚ್ಚಿರಬಾರದು;

iii) ಪ್ರತಿ ಗ್ರಾಮೀಣ ಬ್ಯಾಂಕಿನ ಪಾವತಿಸಿದ ಬಂಡವಾಳ ರೂ. 25 ಲಕ್ಷ, ಅದರಲ್ಲಿ 50 ಪ್ರತಿಶತವನ್ನು ಕೇಂದ್ರ ಸರ್ಕಾರ, 15 ಪ್ರತಿಶತ ರಾಜ್ಯ ಸರ್ಕಾರ ಮತ್ತು 35 ಪ್ರತಿಶತ ಸಾರ್ವಜನಿಕ ವಲಯದ ವಾಣಿಜ್ಯ ಬ್ಯಾಂಕುಗಳನ್ನು ಪ್ರಾಯೋಜಿಸುವ ಮೂಲಕ ಆರ್‌ಆರ್‌ಬಿಗಳ ನೈಜ ಸ್ಥಾಪನೆಗೆ ಕಾರಣವಾಗಿದೆ.

ಈ ಬ್ಯಾಂಕುಗಳಿಗೆ ಉನ್ನತ ಮಟ್ಟದ ಏಜೆನ್ಸಿಗಳು ಸಹಾಯ ಮಾಡುತ್ತವೆ: ಪ್ರಾಯೋಜಕ ಬ್ಯಾಂಕುಗಳು ಅವರಿಗೆ ಹಣವನ್ನು ಸಾಲವಾಗಿ ನೀಡುತ್ತವೆ ಮತ್ತು ಅವರ ಹಿರಿಯ ಸಿಬ್ಬಂದಿಗೆ ಸಲಹೆ ಮತ್ತು ತರಬೇತಿ ನೀಡುತ್ತವೆ. ನಬಾರ್ಡ್ (ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕ್) ಇವರಿಗೆ ಅಲ್ಪಾವಧಿಯ ಮತ್ತು ಮಧ್ಯಮ, ಅವಧಿಯ ಸಾಲಗಳನ್ನು ನೀಡುತ್ತದೆ.

6. ಸಹಕಾರಿ ಬ್ಯಾಂಕ್ (Co-operative Banks) :

1904ರಲ್ಲಿ ಸಹಕಾರ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಸಹಕಾರಿ ಬ್ಯಾಂಕನ್ನು ಸ್ಥಾಪಿಸಲಾಯಿತು. ಸಹಕಾರ ಮತ್ತು ಪರಸ್ಪರ ಸಹಾಯದ ತತ್ವದ ಮೇಲೆ ಅವುಗಳನ್ನು ಸಂಘಟಿಸಿ ನಿರ್ವಹಿಸಲಾಗುತ್ತದೆ. ಸಹಕಾರಿ ಬ್ಯಾಂಕಿನ ಮುಖ್ಯ ಉದ್ದೇಶ ಗ್ರಾಮೀಣ ಸಾಲವನ್ನು ನೀಡುವುದು.

ಭಾರತದ ಸಹಕಾರಿ ಬ್ಯಾಂಕುಗಳು ಗ್ರಾಮೀಣ ಸಹಕಾರಿ ಹಣಕಾಸು ವ್ಯವಸ್ಥೆಯಲ್ಲಿ ಇಂದಿಗೂ ಪ್ರಮುಖ ಪಾತ್ರವಹಿಸುತ್ತವೆ. 1904ರ ಸಹಕಾರಿ ಸಾಲ ಸಂಘಗಳ ಕಾಯ್ದೆ 1912ರಲ್ಲಿ ತಿದ್ದುಪಡಿ ಮಾಡಲಾಯಿತು.

Scanned with CamScanner

ಸಹಕಾರಿ ಬ್ಯಾಂಕಿಂಗ್‌ನಲ್ಲಿ ಮೂರು ಹಂತದ ರಚನೆಗಳು ಅಸ್ತಿತ್ವದಲ್ಲಿವೆ :

i) ಉನ್ನತ ಮಟ್ಟದಲ್ಲಿ ರಾಜ್ಯ ಸಹಕಾರಿ ಬ್ಯಾಂಕ್.

ii) ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸಹಕಾರಿ ಬ್ಯಾಂಕುಗಳು.

iii) ಸ್ಥಳೀಯ ಮಟ್ಟದಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳು

ಭೂ ಅಭಿವೃದ್ಧಿ ಬ್ಯಾಂಕುಗಳು ದೀರ್ಘಕಾಲೀನ ಕೃಷಿ ಸಾಲವನ್ನು ನೀಡುತ್ತವೆ. ಕೃಷಿ ಕ್ಷೇತ್ರಕ್ಕೆ ಮೀಸಲಾದ ಆರ್‌ಬಿಐನ ಹಣವು ವಾಸ್ತವವಾಗಿ ರಾಜ್ಯ ಸಹಕಾರಿ ಬ್ಯಾಂಕು ಮತ್ತು ಕೇಂದ್ರ ಸಹಕಾರಿ ಬ್ಯಾಂಕುಗಳ ಮೂಲಕ ಹಾದುಹೋಗುತ್ತದೆ. ಮೂಲತಃ ಗ್ರಾಮೀಣ ವಲಯದಲ್ಲಿ ನೆಲೆಗೊಂಡಿದ್ದ ಸಹಕಾರಿ ಸಾಲ ಚಳುವಳಿ ಈಗ ನಗರ ಪ್ರದೇಶಗಳಿಗೂ ಹರಡಿದೆ ಮತ್ತು ಎಸ್‌ಸಿಬಿಗಳ ಅಡಿಯಲ್ಲಿ ಅನೇಕ ನಗರ ಸಹಕಾರಿ ಬ್ಯಾಂಕುಗಳು ಬರುತ್ತಿವೆ.

7. ಭೂ ಅಭಿವೃದ್ಧಿ ಬ್ಯಾಂಕ್ (Land Development Bank - LDB) :

ಭೂ ಅಭಿವೃದ್ಧಿ ಬ್ಯಾಂಕ್ (LDB), ಭಾರತದಲ್ಲಿ ಒಂದು ವಿಶೇಷ ರೀತಿಯ ಬ್ಯಾಂಕ್ ಆಗಿದೆ, ಮತ್ತು ಇದು ಅರೆ – ವಾಣಿಜ್ಯ ಬ್ಯಾಂಕಾಗಿದೆ. ಇದು ಠೇವಣಿಗಳನ್ನು ಸ್ವೀಕರಿಸುತ್ತದೆ. ವ್ಯಾಪಾರ ಸಾಲಗಳನ್ನು ನೀಡುತ್ತದೆ ಮತ್ತು ಮೂಲ ಹೂಡಿಕೆ ಉತ್ಪನ್ನಗಳನ್ನು ನೀಡುವಂತಹ ಸೇವೆಗಳನ್ನು ಒದಗಿಸುತ್ತದೆ. ಭೂಮಿ, ಕೃಷಿಯ ಅಭಿವೃದ್ಧಿಯನ್ನು ಉತ್ತೇಜಿಸುವುದು ಮತ್ತು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಭೂ ಅಭಿವೃದ್ಧಿ ಬ್ಯಾಂಕಿನ ಮುಖ್ಯ ಉದ್ದೇಶವಾಗಿದೆ. ತನ್ನ ಶಾಖೆಗಳ ಮೂಲಕ ನೇರವಾಗಿ ಸದಸ್ಯರಿಗೆ ದೀರ್ಘಕಾಲೀನ ಹಣಕಾಸು ಒದಗಿಸುತ್ತದೆ.

ಮೊದಲ ಭೂ ಅಭಿವೃದ್ಧಿ ಬ್ಯಾಂಕ್ ಅನ್ನು 1920ರಲ್ಲಿ ಪಂಜಾಬ್‌ನ ಜಾಂಗ್‌ನಲ್ಲಿ ಪ್ರಾರಂಭಿಸಲಾಯಿತು. ಮೊದಲ ಎಲ್‌ಡಿಬಿಯನ್ನು ಪಂಜಾಬಿನಲ್ಲಿ ಪ್ರಾರಂಭಿಸಿದರೂ, 1929ರಲ್ಲಿ ಚೆನ್ನೈನಲ್ಲಿ ಭೂ ಅಭಿವೃದ್ಧಿ ಬ್ಯಾಂಕ್ ಸ್ಥಾಪನೆಯಾದಾಗ ನಿಜವಾದ ಪ್ರಗತಿ ಪ್ರಾರಂಭವಾಯಿತು. ಅದು ಅಲ್ಲದೆ, ಭೂ ಬ್ಯಾಂಕುಗಳು, ಭೂ ಅಡಮಾನ ಬ್ಯಾಂಕುಗಳು, ಕೃಷಿ ಬ್ಯಾಂಕುಗಳು, ಕೃಷಿ ಅಭಿವೃದ್ಧಿ ಬ್ಯಾಂಕುಗಳನ್ನು ಈಗ ಆಧುನಿಕ ಜಗತ್ತಿನಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ಎಂದು ಕರೆಯಲಾಗುತ್ತದೆ.

ಜಗತ್ತಿನಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ವಿವಿಧ ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳ ಬೈಲಾಗಳು ಪರಸ್ಪರ ಭಿನ್ನವಾಗಿವೆ. ಕೆಲವು ರಾಜ್ಯ ಆಧಾರದ ಮೇಲೆ ಆಯೋಜಿಸಲ್ಪಟ್ಟಿವೆ, ಕೆಲವು ಸಹಕಾರಿ ಆಧಾರದ ಮೇಲೆ ಮತ್ತು ಕೆಲವು ಖಾಸಗಿ ಆಧಾರದ ಮೇಲೆ, ಇನ್ನೂ ಜಂಟಿ ಸ್ಟಾಕ್ ತತ್ವಗಳನ್ನು ಒಳಗೊಂಡಿವೆ.

Scanned with CamScanner

ನಿಧಿಗಳು : ಭೂ ಅಭಿವೃದ್ಧಿ ಬ್ಯಾಂಕುಗಳ ನಿಧಿಯ ಮೂಲಗಳು :

ಷೇರು ಬಂಡವಾಳ

ಸದಸ್ಯರು ಅಥವಾ ಸದಸ್ಯರಲ್ಲದ ಠೇವಣಿ

ಡಿಬೆಂಚರ್‌ಗಳ ಸಂಚಿಕೆ

ಠೇವಣಿಗಳು

ಸರ್ಕಾರದಿಂದ ಸಬ್ಸಿಡಿಗಳ ಮರುಪಾವತಿ

ಇತರ ನಿಧಿಗಳು.

ಸಾಲಗಳು ಮತ್ತು ಮುಂಗಡಗಳು : ಭೂ ಅಭಿವೃದ್ಧಿ ಮತ್ತು ವ್ಯವಹಾರ ಅಭಿವೃದ್ಧಿಯ ಜೊತೆಗೆ ಕೃಷಿ ಸಂಬಂಧಿತ ವಿವಿಧ ಯೋಜನೆಗಳಿಗೆ ಭೂ ಅಭಿವೃದ್ಧಿ ಬ್ಯಾಂಕ್ ದೀರ್ಘಾವಧಿಯ ಹಣವನ್ನು ಒದಗಿಸುತ್ತದೆ. ಸದಸ್ಯರ ಸಾಲ ಪಡೆಯುವ ಸಾಮರ್ಥ್ಯವನ್ನು ಸಾಮಾನ್ಯವಾಗಿ ಬ್ಯಾಂಕಿನಲ್ಲಿ ಅವನು ಹೊಂದಿರುವ ಷೇರುಗಳ ಸಂಖ್ಯೆಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. ಭೂ ಅಭಿವೃದ್ಧಿ ಬ್ಯಾಂಕ್ ನೀಡಿದ ಸಾಲವನ್ನು 20 ರಿಂದ 30 ವರ್ಷಗಳಲ್ಲಿ ಮರುಪಾವತಿಸಲಾಗುತ್ತದೆ. ಸಾಮಾನ್ಯವಾಗಿ, ಸಾಲವನ್ನು ಭೂಮಿಯ ಮೌಲ್ಯದ ಶೇ 50%ರವರೆಗೆ ಅಥವಾ ಆದಾಯದ 30 ಪಟ್ಟುವರೆಗೆ ನೀಡಲಾಗುತ್ತದೆ. ಭದ್ರತಾ ಶೀರ್ಷಿಕೆ-ಪತ್ರಗಳ ಸಂಪೂರ್ಣ ಪರಿಶೀಲನೆ ಮತ್ತು ಸಾಲದ ಅವಶ್ಯಕತೆಯ ನಂತರವೇ ಸಾಲಗಳನ್ನು ನೀಡಲಾಗುತ್ತದೆ. ಸಾಲಗಳಿಗೆ ಬಡ್ಡಿದರಗಳು ಸಾಮಾನ್ಯವಾಗಿ ಕಡಿಮೆ ಆದರೆ ಸುಮಾರು ಶೇ. 11 ರಿಂದ 12ರಷ್ಟು ಮತ್ತು ರೈತರ ಪಾವತಿಸುವ ಸಾಮರ್ಥ್ಯದೊಳಗೆ ಇರುತ್ತವೆ.

8. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀ ಬ್ಯಾಂಕು (ನಬಾರ್ಡ್) (National Bank for Agriculture and Rural Development) (NABARD) :

ಡಾ. ಬಿ. ಶಿವರಾಮನ್ ನೇತೃತ್ವದಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸಾಂಘಿಕ ಪತ್ತಿನ ಹಣಕಾಸು ವ್ಯವಸ್ಥೆಯ ಪುನರ್ ಪರಿಶೀಲನಾ ಸಮಿತಿ (Committee for Reviewing Arragnement for Financial Institutional Credit for Argiculture the Rural Development - (CRAFICARD)ದ ಶಿಫಾರಸ್ಸಿನ ಮೇರೆಗೆ ಸರ್ಕಾರ ಜುಲೈ 1982ರಂದು "ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್ (NABARD) ನ್ನು ನಬಾರ್ಡ್ ಸ್ಥಾಪಿಸಿತು. ನಬಾರ್ಡ್ ಉನ್ನತ ಬ್ಯಾಂಕಾಗಿದ್ದು ಅದು ಕೃಷಿ ಅಭಿವೃದ್ಧಿಗೆ ಸಾಲ ಒದಗಿಸುತ್ತದೆ. ಈ ಬ್ಯಾಂಕು ಸ್ಥಾಪಿತದ ನಂತರ ಕೃಷಿ ಮರುಹಣಕಾಸು ಮತ್ತು ಗ್ರಾಮೀಣ ಅಭಿವೃದ್ಧಿ ನಿಗಮದ (Agricultural

Scanned with CamScanner

Refinance and Development Corporation- ARCD) ಕಾರ್ಮಿಕ ಹಾಗೂ ಭಾರತೀಯ ರಿಝರ್ವ್ ಬ್ಯಾಂಕು (RBI) ಮಾಡುವ ಮರುಹಣಕಾಸಿನ ಕಾರ್ಯಗಳನ್ನು ಇದಕ್ಕೆ ವಹಿಸಿಕೊಡಲಾಯಿತು.

ನಬಾರ್ಡ ಭಾರತೀಯ ರಿಝರ್ವ್ ಬ್ಯಾಂಕಿನ ಅಂಗ ಸಂಸ್ಥೆಯಾಗಿದೆ. ಇದರ ಅರ್ಧದಷ್ಟು ಷೇರು ಬಂಡವಾಳ RBI ಒದಗಿಸಿದೆ. ಉಳಿದ ಅರ್ಧದಷ್ಟು ಷೇರು ಬಂಡವಾಲಗಳನ್ನು ಭಾರತ ಸರ್ಕಾರ ಒದಗಿಸುತ್ತದೆ. ರಿಝರ್ವ್ ಬ್ಯಾಂಕಿನ ಮೂವರು (03) ನಿರ್ದೇಶಕರು (Directors) ನಬಾರ್ಡ್ ಬ್ಯಾಂಕಿನ ನಿರ್ದೇಶಕರಾಗಿಯೂ ಮತ್ತು ರಿಝರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರು (Deputy Governer) ರಾಷ್ಟ್ರೀಯ ಬ್ಯಾಂಕಿನ (ನಬಾರ್ಡ್) ಕಾರ್ಯಾಧ್ಯಕ್ಷರು ಅಂದರೆ ಚೇರಮನ್ (Chairman) ರೆಂದು ನೇಮಿಕವಾಗುತ್ತಾರೆ.

ವಾಣಿಜ್ಯ ಬ್ಯಾಂಕಿನ ಹಾಗೆ ನಬಾರ್ಡ ಉತ್ಪಾದಕ ಘಟಕಗಳಿವೆ, ರೈತರಿಗೆ ನೇರವಾಗಿ ಸಾಲ ಒದಗಿಸುವುದಿಲ್ಲ. ಶೇ. 70 ರಿಂದ 90ರವರೆಗೆ ಸಾಲ ನೀಡಿದ ವಾಣಿಜ್ಯ ಬ್ಯಾಂಕುಗಳಿಗೆ ಸಹಕಾರಿ ಸಂಘಗಳಿಗೆ ಮತ್ತು ಗ್ರಾಮೀಣ ಬ್ಯಾಂಕುಗಳಿಗೆ ನಬಾರ್ಡ್ ಮರುಹಣಕಾಸು ನೀಡುತ್ತದೆ. ಇದಲ್ಲದೆ ಭೂ ಅಭಿವೃದ್ಧಿ ಬ್ಯಾಂಕುಗಳಿಗೂ ಪುನರ್ಧನ ಒದಗಿಸುತ್ತಾರೆ.

ನಬಾರ್ಡ್‌ದ ಕಾರ್ಯಗಳು (Functions of NABARD) :

ರಾಷ್ಟ್ರೀಯ ಬ್ಯಾಂಕು ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತದೆ.

1. ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ಕೃಷಿ, ಚಿಕ್ಕ ಕೈಗಾರಿಕೆ, ಗೃಹ ಮತ್ತು ಗುಡಿ ಕೈಗಾರಿಕೆ, ಕರಕುಶಲ ಕರ್ಮಿಗಳು, ಕುಶಲ ಕೆಲಸಗಾರರು ಇವರೇ ಮೊದಲಾದವರಿಗೆ ವಿವಿಧ ಸಂಸ್ಥೆಗಳು ನೀಡಿದ ಉತ್ಪಾದನೆಯ ಮತ್ತು ಬಂಡವಾಳದ ಸಾಲಗಳಿಗೆ ಪುನರ್ಧನದ ಸೌಲಭ್ಯವನ್ನು ಅದು ಒದಗಿಸುತ್ತದೆ.
2. ಅದು ರಾಜ್ಯಮಟ್ಟದ (ಅಪೇಕ್ಸ್) ಸಹಕಾರಿ ಬ್ಯಾಂಕುಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ, ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಮತ್ತು ಭಾರತೀಯ ರಿಝರ್ವ್ ಬ್ಯಾಂಕಿನಿಂದ ಮನ್ನಿಸಲ್ಪಟ್ಟ ಇತರ ಹಣಕಾಸಿನ ಸಂಸ್ಥೆಗಳಿಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿಯ ಸಾಲಗಳನ್ನು ಒದಗಿಸುತ್ತದೆ.
3. ರಾಜ್ಯ ಸರ್ಕಾರಗಳು ಸರ್ಕಾರಿ ಪತ್ತಿನ ಸಂಘಗಳಿಗೆ ಷೇರು ಬಂಡವಾಳ ಒದಗಿಸಲು ಅನುಕೂಲವಾಗುವಂತೆ ಅವುಗಳಿಗೆ ದೀರ್ಘಾವಧಿಯ ಸಾಲಗಳನ್ನು ಅದು ಒದಗಿಸುತ್ತದೆ.

Scanned with CamScanner

4. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿರುವ ರಾಜ್ಯ ಮಟ್ಟದ ಸಂಸ್ಥೆಗಳು, ಯೋಜನಾ ಆಯೋಗ, ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಇವೆಲ್ಲವುಗಳ ಚಟುವಟಿಕೆಗಳಲ್ಲಿ ಸಮನ್ವಯವನ್ನು ಸಾಧಿಸುವದು ನಬಾರ್ಡ್‌ದ ಜವಾಬ್ದಾರಿಯಾಗಿದೆ.

5. ಪ್ರಾಥಮಿಕ ಸಹಕಾರಿ ಸಂಘಗಳನ್ನು ಹೊರತುಪಡಿಸಿ ಉಳಿದ ಸಹಕಾರಿ ಬ್ಯಾಂಕುಗಳನ್ನು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾರ್ಯ ನಿರ್ವಹಣೆಯನ್ನು ನಬಾರ್ಡ್ ಪರಿಶೀಲಿಸುತ್ತದೆ.

6. ಕೇಂದ್ರ ಸರ್ಕಾರವು ಶಿಫಾರಸ್ಸು ಮಾಡಿದ ಯಾವುದೇ ಸಂಸ್ಥೆಗೆ ದೀರ್ಘಾವಧಿ ಸಾಲವನ್ನು ನೀಡುತ್ತದೆ.

7. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿದ ಯಾವುದೇ ಸಂಸ್ಥೆಯ ಷೇರು ಬಂಡವಾಳಕ್ಕೆ ತನ್ನ ವಂತಿಗೆಯನ್ನು ಸಲ್ಲಿಸಿ ಬಂಡವಾಳ ಪತ್ರ ಅಥವಾ ಸಾಲಪತ್ರಗಳನ್ನು ಕೊಂಡುಕೊಳ್ಳುತ್ತದೆ.

8. ಪ್ರಾಥಮಿಕ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ ಉಳಿದ ಸಹಕಾರಿ ಬ್ಯಾಂಕುಗಳನ್ನು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾರ್ಯ-ನಿರ್ವಹಣೆಯನ್ನು ಪರಿಶೀಲಿಸುತ್ತದೆ.

9. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಸಂಶೋಧನೆ ಕೈಗೊಳ್ಳಲು ನಬಾರ್ಡ್ ನೆರವಾಗುತ್ತದೆ. ಇದಕ್ಕೋಸ್ಕರವೇ ಬ್ಯಾಂಕು 'ಸಂಶೋಧನೆ ಮತ್ತು ಅಭಿವೃದ್ಧಿ ನಿಧಿ'ಯನ್ನು ಹೊಂದಿದೆ.

10. ಬಂಜರು ಭೂಮಿಯ ಅಭಿವೃದ್ಧಿಗಾಗಿ ನಬಾರ್ಡ್ ಶೇ. 100ರಷ್ಟು ಪುನರ್ ಧನವನ್ನು ಒದಗಿಸುತ್ತಿದೆ. ಬಂಜರು ಭೂಮಿಯಲ್ಲಿ ಹುಲ್ಲು ಬೆಳೆಸುವುದು, ಸೌದೆ ಮತ್ತು ಇತರ ಗಿಡ ಮರಗಳನ್ನು ಅಭಿವೃದ್ಧಿಪಡಿಸುತ್ತದೆ.

11. ನಬಾರ್ಡ್ ಲಕ್ನೋದಲ್ಲಿ ಬ್ಯಾಂಕರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ (Banker's Training Institute') ಯೊಂದನ್ನು ಸೆಪ್ಟೆಂಬರ್ 1, 1984ರಂದು ಬೋಲಾಪೂರ (ಪಶ್ಚಿಮ ಬಂಗಾಲ) ದಲ್ಲೊಂದು ತರಬೇತಿ ಸಂಸ್ಥೆಯನ್ನು ತೆಗೆದಿದೆ. ಪತ್ತಿನ ಸಂಸ್ಥೆಗಳ ಸದಸ್ಯರಿಗೆ ತರಬೇತಿ ನೀಡುತ್ತದೆ.

12. ಸ್ವಸಹಾಯ ಸಂಘಗಳಿಗೆ ಸಹಾಯವನ್ನು ಒದಗಿಸುತ್ತದೆ.

13. ಗ್ರಾಮೀಣ ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿಗಾಗಿ ನಬಾರ್ಡ್ ಗುಂಪು ಚಟುವಟಿಕೆಯನ್ನು ಪ್ರೋತ್ಸಾಹಿಸುತ್ತದೆ. ಇದಕ್ಕೆ 100% ಪುನರ್ಧನ ಒದಗಿಸುತ್ತದೆ.

Scanned with CamScanner

14. ಸ್ವರ್ಣ ಜಯಂತಿ ಗ್ರಾಮ ಸ್ವ ರೋಜಗಾರ ಯೋಜನೆ ಅಡಿಯಲ್ಲಿ ಸಾಲ ಒದಗಿಸಿದ ಬ್ಯಾಂಕಿಗೆ ನಬಾರ್ಡ್ ಪುನರ್ಧನ ಒದಗಿಸುತ್ತದೆ.

9. ಎಕ್ಸಿಮ್ ಬ್ಯಾಂಕುಗಳು (Exim Banks) :

ಭಾರತವು ರಫ್ತು (Exprot) ಮತ್ತು ಆಮದು (Import) ಬ್ಯಾಂಕನ್ನು EXIM ಸಾಮಾನ್ಯವಾಗಿ ಬ್ಯಾಂಕು EX ಎಂದು ಕರೆಯುತ್ತಾರೆ. Export ಎಂದರೆ (ರಫ್ತು) IM ಎಂದರೆ Import (ಆಮದು). ಹೀಗಾಗಿ EXIM ಎಂಬುದು ರಫ್ತು ಮತ್ತು ಆಮದಿನ ಬ್ಯಾಂಕು ಎಂದಾಗುತ್ತದೆ. EXIM ಬ್ಯಾಂಕು ಜನೇವರಿ 1, 1982ರಂದು ಕಾರ್ಯಾಚರಣೆ ಪ್ರಾರಂಭಿಸಿತು. ಇದು ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ (IDBI - Industrial Development Bank of India) ನ ಅಂಗ ಸಂಸ್ಥೆಯಾಗಿದೆ. ಇದು ರಫ್ತುದಾರರಿಗೆ ಮತ್ತು ಆಮದುದಾರರಿಗೆ ಹಣಕಾಸಿನ ನೆರವು ಒದಗಿಸುತ್ತದೆ. ಇದಲ್ಲದೆ ವಸ್ತುಗಳ ರಫ್ತು ಮತ್ತು ಆಮದುದಾರರಿಗೆ ಹಣಕಾಸನ್ನು ನೆರವು ಒದಗಿಸುತ್ತದೆ. ಇದಲ್ಲದೆ ವಸ್ತುಗಳ ರಫ್ತು ಮತ್ತು ಆಮದುದಾರರಿಗೆ ಹಣಕಾಸನ್ನು ನೀಡುವ ಸಂಸ್ಥೆಗಳಿಗೂ ಸಹ ನೆರವು ಒದಗಿಸುತ್ತದೆ. ಹೀಗೆ ಎಕ್ಸಿಮ್ ಬ್ಯಾಂಕು ವಾಣಿಜ್ಯ ಬ್ಯಾಂಕು ಮತ್ತು ಇತರ ಸಂಸ್ಥೆಗಳಿಗೆ ಮರು ಹಣಕಾಸಿನ ಸೌಲಭ್ಯ ಒದಗಿಸುತ್ತದೆ.

ಎಕ್ಸಿಮ್ ಬ್ಯಾಂಕಿನ ಬಂಡವಾಳದ ಮೂಲಗಳು (Capital Resources of the EXIM Banks) :

ಎಕ್ಸಿಮ್ ಬ್ಯಾಂಕಿನ ಒಟ್ಟು ಶೇರು ಬಂಡವಾಳ 440 ಕೋಟಿ ರೂಪಾಯಿ. ಹೆಚ್ಚಿನ ಸಂಪನ್ಮೂಲಗಳು ಬೇಕಾದಲ್ಲಿ ಬ್ಯಾಂಕು ಭಾರತ ಸರಕಾರದಿಂದ, ಕೇಂದ್ರ ಬ್ಯಾಂಕಿನಿಂದ ಮತ್ತು ಮಾರುಕಟ್ಟೆಯಿಂದ (ಷೇರು ಮತ್ತು ಡಿಬೆಂಚರಗಳು). ಅಲ್ಲದೆ, ಈ ಬ್ಯಾಂಕು ವಿದೇಶಿ ಹಣಕಾಸಿನ ನೆರವು ಸಹ ಪಡೆಯುತ್ತದೆ.

ಎಕ್ಸಿಮ್ ಬ್ಯಾಂಕಿನ ಕಾರ್ಯಗಳು (Funcations of EXIM Banks) :

ಎಕ್ಸಿಮ್ ಬ್ಯಾಂಕಿನ ಪ್ರಮುಖ ಕಾರ್ಯಗಳು ಕೆಳಗಿನಂತಿವೆ.

1. ಭಾರತ ದೇಶದ ಹಾಗೂ ತೃತೀಯ ದೇಶಗಳಿಗೆ ಸರಕು ಮತ್ತು ಸೇವೆಗಳ ರಫ್ತುಗಳಿಗೆ ಹಾಗೂ ಆಮದಿಗೆ ಹಣಕಾಸಿನ ನೆರವು ನೀಡುತ್ತದೆ.
2. ಯಂತ್ರೋಪಕರಣ ಮತ್ತು ಸಲಕರಣೆಗಳು ರಫ್ತು ಮತ್ತು ಆಮದಿಗೆ ಹಣಕಾಸಿನ ನೆರವು ನೀಡುತ್ತದೆ.
3. ವಿದೇಶಿಗಳಲ್ಲಿ, ಜಂಟಿ ಸಂದಾಯದ ಸಾಹಸ(Joint venture)ಗಳಲ್ಲಿ ತೊಡಗುವವರಿಗೆ ನೆರವು ನೀಡುತ್ತದೆ.

Scanned with CamScanner

4. ಜಾಯಿಂಟ್ ವೆಂಚರ್‌ನಲ್ಲಿ ಪಾಲ್ಗೊಳ್ಳಲು ಅವುಗಳ ಷೇರುಗಳನ್ನು ಖರೀದಿಸಲು ಬ್ಯಾಂಕು ಭಾರತೀಯರಿಗೆ ಸಾಲ ಒದಗಿಸುತ್ತದೆ.
5. ವಣಿಕ ಬ್ಯಾಂಕಿನಕಾರ್ಯಗಳನ್ನು ಕೈಗೊಳ್ಳುತ್ತದೆ. ರಫ್ತು ಮತ್ತು ಆಮದಿನಲ್ಲಿ ಸ್ಟಾಕು, ಷೇರು, ಬಾಂಡು ಮುಂತಾದವುಗಳಲ್ಲಿ ವ್ಯವಹರಿಸುವವರಿಗೆ ಸಾಲ ನೀಡುತ್ತದೆ.
6. ರಫ್ತು ಮತ್ತು ಆಮದಿನಲ್ಲಿ ತೊಡಗಿರುವವರಿಗೆ ತಾಂತ್ರಿಕ, ಆಡಳಿತಾತ್ಮಕ ಮತ್ತು ಹಣಕಾಸಿನ ನೆರವು ನೀಡತುತದೆ.
7. ವಿದೇಶಿ ಸರ್ಕಾರಕ್ಕೆ, ಕಂಪನಿಗಳಿಗೆ ಮತ್ತು ಹಣಕಾಸಿನ ಸಂಸ್ಥೆಗಳಿಗೆ ಹಣಕಾಸಿನ ನೆರವು ನೀಡುತ್ತದೆ.
8. ಭಾರತೀಯ ಕಂಪನಿಗಳಿಗೂ ಸಹ ಸಾಲವನ್ನು ಒದಗಿಸುತ್ತದೆ.
9. ರಫ್ತು ಸಾಲ ನೀಡಿದ ಬ್ಯಾಂಕುಗಳಿಗೆ ಮರುಹಣಕಾಸಿನ ನೆರವನ್ನು ನೀಡುತ್ತದೆ.
10. ವಿಶ್ವ ಬ್ಯಾಂಕು, ಏಷಿಯನ್ ಅಭಿವೃದ್ಧಿ ಬ್ಯಾಂಕು, ಆಫ್ರಿಕನ್ ಅಭಿವೃದ್ಧಿ ಬ್ಯಾಂಕಿನ ಚಟುವಟಿಕೆಗಳಲ್ಲಿ ಭಾರತವು ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ.

ಹೀಗೆ ಭಾರತದ ರಫ್ತನ್ನು ಹೆಚ್ಚಿಸಲು ಎಕ್ಸಿವ್ ಬ್ಯಾಂಕು ಬಹಳ ಸಹಾಯಕಾರಿಯಾಗಿದೆ.

ಪ್ರಶ್ನೆಗಳು

1. ಬ್ಯಾಂಕು ಎಂದರೇನು? ಬ್ಯಾಂಕಿನ ಮಹತ್ವವನ್ನು ವಿವರಿಸಿ.
2. ಭಾರತದಲ್ಲಿ ಬ್ಯಾಂಕುಗಳ ಬೆಳವಣಿಗೆಯನ್ನು ಕುರಿತು ಬರೆಯಿರಿ.
3. ಟಿಪ್ಪಣಿ ಬರೆಯಿರಿ.

   (ಎ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು

   (ಬಿ) ನಬಾರ್ಡ್

   (ಸಿ) ಸಹಕಾರಿ ಬ್ಯಾಂಕುಗಳು

   (ಡಿ) ಭೂ ಅಭಿವೃದ್ಧಿ ಬ್ಯಾಂಕುಗಳು

* * *

Scanned with CamScanner

2. ಭಾರತೀಯ ವಾಣಿಜ್ಯ ಬ್ಯಾಂಕುಗಳು (Indian Commericial Banks)

1. ಸಾರ್ವಜನಿಕ ವಲಯ, ಖಾಸಗಿ ವಲಯ ಮತ್ತು ವಿದೇಶಿ ವಿನಿಮಯದ ಬ್ಯಾಂಕುಗಳು
2. ಕಾರ್ಯಗಳು ಮತ್ತು ಸೇವೆಗಳು
3. ಬ್ಯಾಂಕುಗಳು ಮತ್ತು ಆರ್ಥಿಕಾಭಿವೃದ್ಧಿ
4. ಬ್ಯಾಂಕುಗಳ ಅಧಾವೆ ಪತ್ರ
5. ಬಂಡವಾಳ ನಿರ್ವಹಣೆ
6. ಹೂಡಿಕೆಯ ನೀತಿಯ ತತ್ವಗಳು

1. ಸಾರ್ವಜನಿಕ ವಲಯ, ಖಾಸಗಿ ವಲಯ ಮತ್ತು ವಿದೇಶಿ ವಿನಿಯಮ ಬ್ಯಾಂಕುಗಳು (Public Sector, Private Sector and Foreign Exchange Banks) :

ವಾಣಿಜ್ಯ ಬ್ಯಾಂಕ್ ಎನ್ನುವುದು ಲಾಭ ಆಧಾರಿದ ಹಣಕಾಸು ಸಂಸ್ಥೆಯಾಗಿದ್ದು ಅದು ಸಾಲಗಳನ್ನು ನೀಡುತ್ತದೆ. ಮತ್ತು ಠೇವಣಿಗಳನ್ನು ಸ್ವೀಕರಿಸುತ್ತದೆ ಅಲ್ಲದೇ ಓವರ್‌ಡ್ರಾಫ್ಟ್ ಸೌಲಭ್ಯಗಳು ಮತ್ತು ಹಣದ ಎಲೆಕ್ಟ್ರಾನಿಕ್ ವರ್ಗಾವಣೆಯಂತಹ ಹಣಕಾಸಿನ ಸೇವೆಗಳನ್ನು ನೀಡುತ್ತದೆ.

ಕಲ್ಬರ್ಟ್ಸನ್ (Culbertson) ಅವರ ಪ್ರಕಾರ, "ವಾಣಿಜ್ಯ ಬ್ಯಾಂಕುಗಳು ವ್ಯವಹಾರಕ್ಕೆ ಅಲ್ಪಾವಧಿಯ ಸಾಲವನ್ನು ನೀಡುವ ಸಂಸ್ಥೆಗಳು ಮತ್ತು ಪ್ರಕ್ರಿಯೆಯಲ್ಲಿ ಹಣವನ್ನು ಸೃಷ್ಟಿಸುತ್ತದೆ. ಎಂದು ವ್ಯಾಖ್ಯಾನಿಸಿದ್ದಾನೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ವಾಣಿಜ್ಯ ಬ್ಯಾಂಕುಗಳು ಸಾರ್ವಜನಿಕರಿಂದ ಬೇಡಿಕೆ ಠೇವಣಿಗಳನ್ನು ಸ್ವೀಕರಿಸುವ, ಬ್ಯಾಂಕಿನಿಂದ ಹಣವನ್ನು ಇನ್ನೊಂದಕ್ಕೆ ವರ್ಗಾಯಿಸುವ ಮತ್ತು ಲಾಭವನ್ನು ಗಳಿಸುವ ಹಣಕಾಸು ಸಂಸ್ಥೆಗಳಾಗಿವೆ.

ಕೈಗಾರಿಕೆಗಳಿಗೆ ಅಲ್ಪಾವಧಿಯ ಮತ್ತು ಮಧ್ಯಮಾವಧಿ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಾಣಿಜ್ಯ ಬ್ಯಾಂಕುಗಳು ಮಹತ್ವದ ಪಾತ್ರವಹಿಸುತ್ತವೆ. ಅವು ದೀರ್ಘಾವಧಿಯ ಸಾಲವನ್ನು ಒದಗಿಸುವುದಿಲ್ಲ, ಇದರಿಂದಾಗಿ ಸ್ವತ್ತುಗಳ ದ್ರವ್ಯತೆಯನ್ನು ಕಾಪಾಡಿಕೊಳ್ಳಬೇಕು. ವಾಣಿಜ್ಯ ಬ್ಯಾಂಕುಗಳ ಹಣವನ್ನು ಸಾಮಾನ್ಯ ಜನರಿಗೆ ಸೇರಿದ್ದು ಮತ್ತು ಸಣ್ಣ ಸೂಚನೆಯಂತೆ ಹಿಂಪಡೆಯಲಾಗುತ್ತದೆ; ಆದ್ದರಿಂದ, ವಾಣಿಜ್ಯ

Scanned with CamScanner

ಬ್ಯಾಂಕುಗಳು ಸ್ಪಷ್ಟವಾದ ಮತ್ತು ಸುಲಭವಾಗಿ ಮಾರುಕಟ್ಟೆ ಮಾಡಬಹುದಾದ ಭದ್ರತೆಗಳ ಬೆಂಬಲದೊಂದಿಗೆ ಅಲ್ಪಾವಧಿಗೆ ಸಾಲವನ್ನು ನೀಡಲು ಆದ್ಯತೆ ನೀಡುತ್ತವೆ. ವಾಣಿಜ್ಯ ಬ್ಯಾಂಕುಗಳು, ವ್ಯವಹಾರಗಳಿಗೆ ಸಾಲವನ್ನು ಒದಗಿಸುವಾಗ, ವ್ಯವಹಾರದ ಸ್ವರೂಪ ಮತ್ತು ಗಾತ್ರ, ಹಣಕಾಸಿನ ಸ್ಥಿತಿ ಮತ್ತು ವ್ಯವಹಾರದ ಲಾಭದಾಯಕತೆ ಮತ್ತು ಸಾಲವನ್ನು ಮರುಪಾವತಿಸುವ ಸಾಮರ್ಥ್ಯದಂತಹ ವಿವಿಧ ಅಂಶಗಳನ್ನು ಪರಿಗಣಿಸುತ್ತವೆ.

ವಾಣಿಜ್ಯ ಬ್ಯಾಂಕುಗಳಲ್ಲಿ ಮೂರು ವಿಧಗಳಾಗಿವೆ. ಅವುಗಳು ಕೆಳಗಿನಂತಿವೆ.

i. ಸಾರ್ವಜನಿಕ ವಲಯದ ಬ್ಯಾಂಕುಗಳು (Public Sector Banks):

ಒಂದು ದೇಶದ ಸರ್ಕಾರವು ರಾಷ್ಟ್ರೀಕರಿಸಿದ ಒಂದು ರೀತಿಯ ವಾಣಿಜ್ಯ ಬ್ಯಾಂಕುಗಳನ್ನು ಸಾರ್ವಜನಿಕ ವಲಯದ ಬ್ಯಾಂಕುಗಳೆಂದು ಕರೆಯುತ್ತಾರೆ. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ, ಪ್ರಮುಖ ಪಾಲನ್ನು ಸರ್ಕಾರ ಹೊಂದಿದೆ. ಭಾರತದಲ್ಲಿ, ಸಾರ್ವಜನಿಕ ವಲಯದ ಬ್ಯಾಂಕುಗಳು ಕೇಂದ್ರ ಬ್ಯಾಂಕ್ ಆಗಿರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ)ದ ಮಾರ್ಗಸೂಚಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಕಾರ್ಪೋರೇಷನ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ದೇನಾ ಬ್ಯಾಂಕ್, ಮತ್ತು ಪಂಜಾಬ್ ಇವು ಭಾರತೀಯ ಸಾರ್ವಜನಿಕ ವಲಯದ ಕೆಲವು ಪ್ರಮುಖ ಬ್ಯಾಂಕುಗಳಾಗಿವೆ.

ii. ಖಾಸಗಿ ವಲಯದ ಬ್ಯಾಂಕುಗಳು (Private Sector Banks):

ಖಾಸಗಿ ವಲಯದ ವಾಣಿಜ್ಯ ಬ್ಯಾಂಕುಗಳಲ್ಲಿ ಷೇರು ಬಂಡವಾಲದ ಪ್ರಮುಖ ಭಾಗವನ್ನು ಖಾಸಗಿ ವ್ಯವಹಾರಗಳು ಮತ್ತು ವ್ಯಕ್ತಿಗಳು ಹೊಂದಿರುತ್ತಾರೆ. ಈ ಬ್ಯಾಂಕುಗಳನ್ನು ಸೀಮಿತ ಹೊಣೆಗಾರಿಕೆ ಹೊಂದಿರುವ ಕಂಪನಿಗಳಾಗಿ ನೋಂದಾಯಿಸಲಾಗಿದೆ. ಭಾರತೀಯ ಖಾಸಗಿ ವಲಯದ ಕೆಲವು ಬ್ಯಾಂಕುಗಳು ವೈಶ್ಯ ಬ್ಯಾಂಕ್, ಇಂಡಸ್ಟ್ರಿಯಲ್ ಕ್ರೆಡಿಟ್ ಮತ್ತು ಇನ್ವೆಸ್ಟ್‌ಮೆಂಟ್ ಕಾರ್ಪೋರೇಷನ್ (ICICI) ಆಫ್ ಇಂಡಿಯಾ ಬ್ಯಾಂಕ್, ಮತ್ತು ವಸತಿ ಅಭಿವೃದ್ಧಿ ಹಣಕಾಸು ನಿಗಮ (HDFC) ಬ್ಯಾಂಕ್ ಇತ್ಯಾದಿ.

ವಾಣಿಜ್ಯ ಬ್ಯಾಂಕಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಗಮನಾರ್ಹ ಪ್ರಾಮುಖ್ಯತೆಯನ್ನು ನೀಡುವುದರ ಜೊತೆಗೆ ಸಾರ್ವಜನಿಕರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುತ್ತವೆ.

iii. ವಿದೇಶಿ ಬ್ಯಾಂಕುಗಳು (Foreign Banks):

ವಿದೇಶದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ವಾಣಿಜ್ಯ ಬ್ಯಾಂಕುಗಳನ್ನು ವಿವಿಧ ದೇಶಗಳಲ್ಲಿ ಶಾಖೆಗಳನ್ನು ಹೊಂದಿದೆ. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ವಿದೇಶಿ ಬ್ಯಾಂಕುಗಳು ಹಾಂಗ್‌ಕಾಂಗ್ ಮತ್ತು ಶಾಂಘೈ ಬ್ಯಾಂಕಿಂಗ್

Scanned with CamScanner

ಕಾರ್ಪೊರೇಷನ್ (ಎಚ್‌ಎಸ್‌ಬಿಎಸ್) ಸಿಟಿಬ್ಯಾಂಕ್, ಅಮೇರಿಕನ್ ಎಕ್ಸ್‌ಪ್ರೆಸ್ ಬ್ಯಾಂಕ್, ಸ್ಟ್ಯಾಂಡರ್ಡ್ & ಚಾರ್ಟರ್ಡ್ ಬ್ಯಾಂಕ್, ಮತ್ತು ಗ್ರಿಂಡ್ಲೇಸ್ ಬ್ಯಾಂಕ್, ಭಾರತದಲ್ಲಿ 1991ರ ಆರ್ಥಿಕ ಸುಧಾರಣೆಗಳ ನಂತರ, ವಿದೇಶಿ ಬ್ಯಾಂಕುಗಳ ಸಂಖ್ಯೆಯಲ್ಲಿ ಶೀಘ್ರ ಏರಿಕೆ ಕಂಡುಬಂದಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಎಂಬುದು ಸುಪ್ರೀಂ ಬ್ಯಾಂಕ್ ಮತ್ತು ವಿತ್ತೀಯ ಪ್ರಾಧಿಕಾರವಾಗಿದ್ದು, ಇದು ದೇಶದ ಬ್ಯಾಂಕಿಂಗ್ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ. ಇದು ಬ್ಯಾಂಕರ್ ಬ್ಯಾಂಕ್, ಇದು ಸಹಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಅಭಿವೃದ್ಧಿ ಬ್ಯಾಂಕುಗಳಂತಹ ದೇಶದ ಎಲ್ಲಾ ಬ್ಯಾಂಕುಗಳನ್ನು ನಿಯಂತ್ರಿಸುತ್ತದೆ. ವಾಣಿಜ್ಯ ಬ್ಯಾಂಕ್ ಸಾರ್ವಜನಿಕ ವಲಯದ ಬ್ಯಾಂಕುಗಳು, ಖಾಸಗಿ ವಲಯದ ಬ್ಯಾಂಕ್, ವಿದೇಶಿ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ಸ್ಥಳೀಯ ಪ್ರದೇಶದ ಬ್ಯಾಂಕುಗಳು ಇತ್ಯಾದಿಗಳನ್ನು ಒಳಗೊಂಡಿದೆ. 1969ಕ್ಕಿಂತ ಮೊದಲು, ಎಂಟು ಬ್ಯಾಂಕುಗಳು (ಎಸ್‌ಬಿಐ ಮತ್ತು ಏಳು ಸಹಾಯಕ ಬ್ಯಾಂಕುಗಳು) ಹೊರತುಪಡಿಸಿ, ಭಾರತದ ಎಲ್ಲಾ ಬ್ಯಾಂಕುಗಳು ಖಾಸಗಿ ವಲಯದ ಬ್ಯಾಂಕುಗಳಾಗಿವೆ ಜುಲೈ 1969ರಲ್ಲಿ 14 ವಾಣಿಜ್ಯ ಬ್ಯಾಂಕುಗಳು ಮತ್ತು 1980ರಲ್ಲಿ 6 ರಾಷ್ಟ್ರೀಯಕರಣಗೊಂಡವು. ಇದಲ್ಲದೆ, 1991ರಲ್ಲಿ ಉದಾರೀಕರಣ ನೀತಿಯನ್ನು ಪರಿಚಯಿಸಲಾಯಿತು, ನಂತರ ಖಾಸಗಿ ಬ್ಯಾಂಕುಗಳು ಚಿತ್ರಕ್ಕೆ ಬಂದವು.

ಸಾರ್ವಜನಿಕ ವಲಯದ ಬ್ಯಾಂಕಿನ ವ್ಯಾಖ್ಯೆ
(Definition of Public Sector Bank) :

ಸಾರ್ವಜನಿಕ ವಲಯದ ಬ್ಯಾಂಕುಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದೊಂದಿಗೆ ಶೇ50 ಕ್ಕಿಂತ ಹೆಚ್ಚು ಷೇರುಗಳನ್ನು ಹೊಂದಿರುವ ಬ್ಯಾಂಕುಗಳಾಗಿವೆ. ಈ ಬ್ಯಾಂಕುಗಳನ್ನು ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿ ಮಾಡಲಾಗಿದೆ. ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು (PSB) ಅತಿ ದೊಡ್ಡ ವರ್ಗವಾಗಿದೆ ಮತ್ತು ಸ್ವಾತಂತ್ರ್ಯದ ಮೊದಲು ಹೊರಹೊಮ್ಮಿದೆ.

ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾರುಕಟ್ಟೆ ಪಾಲಿನ ಶೇ70 ಕ್ಕಿಂತ ಹೆಚ್ಚು ಸಾರ್ವಜನಿಕ ವಲಯದ ಬ್ಯಾಂಕುಗಳ ಪ್ರಾಬಲ್ಯವನ್ನು ಹೊಂದಿದೆ. ಈ ಬ್ಯಾಂಕುಗಳನ್ನು ವಿಶಾಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಅಂದರೆ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಮತ್ತು ಅದರ ಸಹವರ್ತಿಗಳು.

ಬಹುತೇಕ ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕುಗಳು ವ್ಯವಹಾರ ಮಾದರಿ, ಸಾಂಸ್ಥಿಕ ರಚನೆ ಮತ್ತು ಮಾನವ ಸಂಪನ್ಮೂಲ ನೀತಿಗಳನ್ನು ಹೊಂದಿವೆ. ಸಾರ್ವಜನಿಕ ವಲಯದ ಬ್ಯಾಂಕುಗಳು (Public Sector Banks) ಭಾರತದ ಪ್ರಮುಖ ವಿಧದ

Scanned with CamScanner

ಬ್ಯಾಂಕ್‌ಗಳಾಗಿವೆ. ಅಲ್ಲಿ ಬಹುಪಾಲು ಪಾಲನ್ನು (ಅಂದರೆ 50% ಕ್ಕಿಂತ ಹೆಚ್ಚು) ಸರಕಾರವು ಹೊಂದಿದೆ. ಈ ಬ್ಯಾಂಕುಗಳ ಷೇರುಗಳನ್ನು ಷೇರು ವಿನಿಮಯ ಕೇಂದ್ರಗಳಲ್ಲಿ ಪಟ್ಟಿ ಮಾಡಲಾಗಿದೆ. ಭಾರತದಲ್ಲಿ 1 ಸರ್ಕಾರಿ ಸ್ವಾಮ್ಯದ ಪಾವತಿ ಬ್ಯಾಂಕ್ ಜೊತೆಗೆ ಒಟ್ಟು 12 ಸಾರ್ವಜನಿಕ ವಲಯದ ಬ್ಯಾಂಕುಗಳಿವೆ.

ಸಾರ್ವಜನಿಕ ವಲಯದ ಬ್ಯಾಂಕುಗಳ ಉದಯ (Emagence of PSBs):

ವಾಣಿಜ್ಯ ಬ್ಯಾಂಕುಗಳು ನಿರ್ವಹಿಸುವ ಮಾಧ್ಯಮಿಕ ಕಾರ್ಯಗಳನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವರ್ಗೀಕರಿಸಬಹುದು, ಅವುಗಳೆಂದರೆ –

i. ಪ್ರಾತಿನಿಧಿಕ ಸೇವೆಗಳು (Agency Services)

ii. ಸಾಮಾನ್ಯ ಉಪಯುಕ್ತ ಸೇವೆಗಳು (ಸರ್ವೋಪಯೋಗಿ ಸೇವೆಗಳು) (General Utility Services)

(i) ಪ್ರಾತಿನಿಧಿಕ ಸೇವೆಗಳು (Agency Services): ವಾಣಿಜ್ಯ ಬ್ಯಾಂಕುಗಳು ತಮ್ಮ ಗ್ರಾಹಕರ ಪ್ರತಿನಿಧಿಯಾಗಿ ಅನೇಕ ಸೇವೆಗಳನ್ನು ಸಲ್ಲಿಸುತ್ತದೆ. ಆ ಪ್ರಾತಿನಿಧಿಕ ಸೇವೆಗಳು ಕೆಳಗಿನಂತಿವೆ :

ಹಣವನ್ನು ವಸೂಲಿ ಮಾಡುವುದು (Collection of Money): ತನ್ನ ಗ್ರಾಹಕರಿಗೆ ಬರಬೇಕಾದ ಬಡ್ಡಿ, ಲಾಭಾಂಶಗಳು, ವಿಶ್ರಾಂತಿ ವೇತನ, ವೃದ್ಧಾಪ್ಯ ವೇತನ, ಸಂಬಳ, ಬಾಡಿಗೆ, ವಂತಿಗೆ ಮೊದಲಾದವುಗಳನ್ನು ಬ್ಯಾಂಕು ವಸೂಲಿ ಮಾಡಿ ಅವರ ಖಾತೆಗೆ ಜಮಾ ಮಾಡುತ್ತದೆ. ಬ್ಯಾಂಕು ತನ್ನ ಗ್ರಾಹಕರಿಗೆ ಬಂದ ಚೆಕ್ಕುಗಳು (Cheques), ಹುಂಡಿಗಳನ್ನು (Bills of Exchange) ವಚನ ಪತ್ರಗಳನ್ನು (Promissory Notes) ಮತ್ತು ಅಂಚೆಯ ಆದೇಶ (Postal Orders) ಗಳನ್ನು ವಸೂಲಿ ಮಾಡುತ್ತದೆ. ಈ

Scanned with CamScanner

[illegible] (Commission) [illegible]

[illegible] (Payment of Money): [illegible]

[illegible] (Purchase and Sale of Securities): [illegible] (Securities) [illegible]

[illegible] (Remittance of Money): [illegible] (Mail Transfer) [illegible]

[illegible] (Giving Suggestions): [illegible] (Securities) [illegible]

[illegible] (Acts as Correspondent and representatives): [illegible]

[illegible] (Serving as Trustee, Executor and Attorney): [illegible]

Scanned with CamScanner

ತನ್ನ ಗ್ರಾಹಕನ ಧರ್ಮದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ಗ್ರಾಹಕನು ತನ್ನ ಆಸ್ತಿಗೆ ಬ್ಯಾಂಕನ್ನು ಧರ್ಮದರ್ಶಿಯಾಗಿ ನೇಮಿಸಿದರೆ ಬ್ಯಾಂಕು ಆ ಆಸ್ತಿಯನ್ನು ಜಾಗರೂಕತೆಯಿಂದ ರಕ್ಷಿಸಿ, ಗ್ರಾಹಕನ ಹಿತವನ್ನು ಕಾಪಾಡಬೇಕಾಗುತ್ತದೆ.

ಬ್ಯಾಂಕು ತನ್ನ ಗ್ರಾಹಕರಿಗೆ ನಿರ್ವಾಹಕ (Executor) ನಾಗಿ ಸೇವೆ ಸಲ್ಲಿಸುತ್ತದೆ. (ನಿರ್ವಾಹಕ ಎಂದರೆ ಅಂತಿಮ ಇಷ್ಟು ಪತ್ರವನ್ನು ಬರೆದಿರುವ (Testator) ವ್ಯಕ್ತಿಯು ತನ್ನ ಮರಣದ ನಂತರ ತನ್ನ ಉಯಿಲನ್ನು (will) ಕಾರ್ಯರೂಪಕ್ಕೆ ತರಲು ನೇಮಿಸಿದ ವ್ಯಕ್ತಿ). ನಿರ್ವಾಹಕನಾಗಿ ಅಥವಾ ಆಡಳಿತಾಧಿಕಾರಿಯಾಗಿ ಬ್ಯಾಂಕು ಮರಣ ಹೊಂದಿದ ತನ್ನ ಗ್ರಾಹಕನಿಗೆ ಬರಬೇಕಾದ ಹಣವನ್ನು ವಸೂಲು ಮಾಡುತ್ತದೆ ಮತ್ತು ಗ್ರಾಹಕನು ತೀರಿಸಬೇಕಾದ ಸಾಲವನ್ನು ಮರುಪಾವತಿ ಮಾಡುತ್ತದೆ.

ಕೆಲವು ಸಂದರ್ಭಗಳಲ್ಲಿ ಬ್ಯಾಂಕು ತನ್ನ ಗ್ರಾಹಕರ ವಕೀಲನಾಗಿಯೂ ಕೆಲಸ ನಿರ್ವಹಿಸುತ್ತದೆ. ವಕೀಲ (Attorney) ಎಂದರೆ ತನ್ನ ಪರವಾಗಿ ಕರ್ತವ್ಯ ನಿರ್ವಹಸಲು ಇನ್ನೊಬ್ಬ ವ್ಯಕ್ತಿಯಿಂದ ಅಧಿಕಾರ ಪತ್ರದ ಮೂಲಕ ನೇಮಿಸಲ್ಪಟ್ಟ ವ್ಯಕ್ತಿ ವಕೀಲನಾಗಿ ಬ್ಯಾಂಕು ಗ್ರಾಹಕನು ಹೂಡಿಕೆ ಮಾಡಿರುವ ಹಣದ ಮೇಲೆ ದೊರೆಯುವ ಬಡ್ಡಿ ಮತ್ತು ಲಾಭಾಂಶಗಳನ್ನು ವಸೂಲಿ ಮಾಡಿ ರಶೀದಿ ಕೊಡುತ್ತದೆ. ಅಲ್ಲದೆ ಬ್ಯಾಂಕು ಗ್ರಾಹಕರ ಪರವಾಗಿ ಬಂಡವಾಳ ಪತ್ರಗಳನ್ನು ಖರೀದಿಸುತ್ತದೆ ಮತ್ತು ಮಾರಾಟ ಮಾಡುತ್ತದೆ.

ವ್ಯಾಪಾರಿ ಬ್ಯಾಂಕಿನ ಸೇವೆಗಳನ್ನು ಒದಗಿಸುತ್ತದೆ (Providing Merchant Bankinge Services): ವ್ಯಾಪಾರಿ ಬ್ಯಾಂಕಿನ ಸೇವೆಗಳನ್ನು ಒದಗಿಸುವುದಕ್ಕಾಗಿಯೇ ಬ್ಯಾಂಕುಗಳಲ್ಲಿ ಒಂದು ಪ್ರತ್ಯೇಕ ವಿಭಾಗವಿರುತ್ತದೆ. ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿ ವೃಂದಕ್ಕೆ ತಾಂತ್ರಿಕ, ಹಣಕಾಸಿನ, ನಿರ್ವಹಣಾತ್ಮಕ ಮತ್ತಿತರ ಬ್ಯಾಂಕೇತರ ಸೇವೆಗಳನ್ನು ಒಂದೇ ಕಡೆಯಲ್ಲಿ ಬ್ಯಾಂಕು ಒದಗಿಸುತ್ತದೆ. ಇದೇ ವ್ಯಾಪಾರಿ ಬ್ಯಾಂಕಿನ ಸೇವೆ.

(ii) ಸಾಮಾನ್ಯ ಉಪಯುಕ್ತ ಸೇವೆಗಳು (ಸರ್ವೋಪಯೋಗಿ ಸೇವೆಗಳು) (General Utility Services): ಬ್ಯಾಂಕು ತನ್ನ ಗ್ರಾಹಕರಿಗೆ ಮಾತ್ರವಲ್ಲದೆ ಸಾರ್ವತ್ರಿಕವಾಗಿ ಎಲ್ಲಾ ಜನರಿಗೆ ಉಪಯೋಗವಾಗುವಂಥ ಸೇವೆಗಳನ್ನು ಸಲ್ಲಿಸುತ್ತದೆ. ಅವು ಕೆಳಗಿನಂತಿವೆ.

ಸುರಕ್ಷಾ ಪೆಟ್ಟಿಗೆಗಳನ್ನು ಒದಗಿಸುವುದು (Providing Safe Deposits Lockers): ವಾಣಿಜ್ಯ ಬ್ಯಾಂಕುಗಳು ಸಾರ್ವಜನಿಕರಿಗೆ ಸ್ವಲ್ಪ ಕಮಿಷನ್ನಿನ ಆಧಾರದ ಮೇಲೆ ಬೆಳ್ಳಿ, ಬಂಗಾರ, ಒಡವೆ, ಮಹತ್ವದ ಕಾಗದ ಪತ್ರ ಮತ್ತು ಇತರ ಬೆಲೆ ಬಾಳುವ ವಸ್ತುಗಳನ್ನು ಸುರಕ್ಷಿತವಾಗಿಟ್ಟುಕೊಳ್ಳುವ ಸುರಕ್ಷಾ ಪೆಟ್ಟಿಗೆಗಳನ್ನು ಒದಗಿಸುತ್ತದೆ.

ಪ್ರಯಾಣಿಕರ ಚೆಕ್ಕುಗಳು ಮತ್ತು ಪತ್ತಿನ (ಉದ್ದರಿ) ಪತ್ರಗಳನ್ನು ಒದಗಿಸುವುದು (Issuing Travellers Cheque and Letter of Credit): ಪ್ರಯಾಣಿಕರ

Scanned with CamScanner

ಚೆಕ್ಕುಗಳು ಮತ್ತು ಪತ್ತಿನ ಪತ್ರಗಳನ್ನು ನೀಡುವ ಮೂಲಕ ಬ್ಯಾಂಕುಗಳು ಪ್ರಯಾಣಿಕರಿಗೆ ಮತ್ತು ವ್ಯಾಪಾರಸ್ಥರಿಗೆ ಬಹು ಉಪಯುಕ್ತ ಸೇವೆಯನ್ನು ಸಲ್ಲಿಸುತ್ತದೆ.

ಅಂಕಿ ಸಂಖ್ಯೆ ಮತ್ತು ವ್ಯಾಪಾರದ ಮಾಹಿತಿಗಳನ್ನು ಸಂಗ್ರಹಿಸುವುದು (Collecting Statistical and Business Information): ವಾಣಿಜ್ಯ ಬ್ಯಾಂಕುಗಳು ತಮ್ಮ ಗ್ರಾಹಕರ ಪತ್ತಿನ ಅರ್ಹತೆಯ ಬಗ್ಗೆ ಮಾಹಿತಿಯನ್ನು ಪೂರೈಸುತ್ತದೆ. ಅಲ್ಲದೆ ವ್ಯಾಪಾರ ಮತ್ತು ಉದ್ಯಮದ ಸ್ಥಿತಿಗತಿಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ತಮ್ಮ ಗ್ರಾಹಕರಿಗೆ ಒದಗಿಸುತ್ತದೆ.

ವಂತಿಗೆ ಭರವಸೆ ಕಾರ್ಯ (Underwritings work): ಕಂಪನಿಗಳು ಹೊರಡಿಸುವ ಷೇರು ಮತ್ತು ಡಿಬೆಂಚರುಗಳ ವಂತಿಗೆಯ ಭರವಸೆ ವ್ಯವಹಾರಗಳನ್ನು ವಾಣಿಜ್ಯ ಬ್ಯಾಂಕುಗಳು ಕೈಗೊಳ್ಳುತ್ತವೆ. ಕಂಪನಿಗಳು ತಮಗೆ ಬೇಕಾಗುವ ಬಂಡವಾಳವನ್ನು ಖಚಿತವಾಗಿ ಪಡೆಯಲು ಬ್ಯಾಂಕುಗಳು ಭರವಸೆಯನ್ನೂ ಪಡೆಯುತ್ತವೆ. ಇಂತಹ ಭರವಸೆಗಳನ್ನು ನೀಡುವುದರಿಂದ ಬ್ಯಾಂಕುಗಳಿಗೆ ಆದಾಯವು ಬರುತ್ತದೆ.

ಇತರ ಸೇವೆಗಳು (Other Services): ವಾಣಿಜ್ಯ ಬ್ಯಾಂಕುಗಳು ಆರ್ಥಿಕ ಮತ್ತು ಔದ್ಯೋಗಿಕ ವಿಷಯಗಳ ಜ್ಞಾನ ಪ್ರಸಾರಕ್ಕೆ ಸೂಕ್ತ ನಿಯತಕಾಲಿಕೆ ಪತ್ರಿಕೆ (Peridicals) ಗಳನ್ನು ಪ್ರಕಟಿಸುತ್ತದೆ. ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಪುಸ್ತಕ ಬ್ಯಾಂಕು (Book Bank) ಸೌಲಭ್ಯ, ವಿದ್ಯಾರ್ಥಿ ವೇತನ ಮೊದಲಾದವುಗಳನ್ನು ಒದಗಿಸುತ್ತದೆ. ನೌಕರರ ಹಾಗೂ ಸಾರ್ವಜನಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ. ಅಲ್ಲದೆ ಶಿಕ್ಷಣ, ತರಬೇತಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆ ಮೊದಲಾದವುಗಳಿಗೆ ವಾಣಿಜ್ಯ ಬ್ಯಾಂಕುಗಳು ನೆರವು ನೀಡುತ್ತವೆ.

ಬ್ಯಾಂಕಿನ ಎಲ್ಲಾ ಕಾರ್ಯಗಳನ್ನು (Chart) ಪಟ್ಟಿಯಲ್ಲಿ ತೋರಿಸಲಾಗಿದೆ.

ಬ್ಯಾಂಕಿನ ಕಾರ್ಯಗಳು

ಪ್ರಾಥಮಿಕ ಕಾರ್ಯಗಳು	ಮಾಧ್ಯಮಿಕ ಕಾರ್ಯಗಳು
* ಠೇವಣಿಗಳನ್ನು ಸ್ವೀಕರಿಸುವುದು	* ಹಣ ರವಾನಿಸುವುದು
	* ವಿದೇಶಿ ವ್ಯಾಪಾರಕ್ಕೆ
	* ಆಂತರಿಕ ವ್ಯಾಪಾರಕ್ಕೆ
	* ಪತ್ತು ನಿರ್ಮಾಣ
* ಸಾಲ ಮತ್ತು ಮುಂಗಡಗಳನ್ನು ನೀಡುವುದು ಸಾಲ ಮತ್ತು ಮುಂಗಡಗಳು	* ವಿದೇಶಿ ವಿನಿಮಯದ ಖರೀದಿ ಮತ್ತು ಮಾರಾಟ

Scanned with CamScanner

* ಪ್ರವರ ಡ್ರಾಫ್ಟ್
* ನಗದು ಉದ್ದರಿ
* ಹುಂಡಿ ಮುರಿಯುವುದು

ಪ್ರಾತಿನಿಧಿಕ ಸೇವೆಗಳು

* ಹಣವನ್ನು ವಸೂಲಿ ಮಾಡುವುದು
* ಹಣವನ್ನು ಪಾವತಿ ಮಾಡುವುದು
* ಭದ್ರತೆಗಳನ್ನು ಕೊಳ್ಳುವುದು ಮತ್ತು ಮಾರುವುದು
* ಹಣ ರವಾನೆ ಮಾಡುವುದು
* ಸಲಹೆಗಳನ್ನು ನೀಡುವುದು
* ಬಾತ್ಮೀದಾರ ಮತ್ತು
* ಪ್ರತಿನಿಧಿಯಾಗಿ ಕೆಲಸ
* ಧರ್ಮದರ್ಶಿ, ನಿರ್ವಾಹಕ ಮತ್ತು
* ವಕೀಲನಾಗಿ ಸೇವೆ ಸಲ್ಲಿಸುವುದು.

* ಕೈಗಾರಿಕೆಗಳಿಗೆ ಹಣ
* ಸಾಮಾಜಿಕ-ಆರ್ಥಿಕ
* ಉದ್ದೇಶಗಳ ಈಡೇರಿಕೆ

ಸಾಮಾನ್ಯ ಉಪಯುಕ್ತ ಸೇವೆಗಳು

* ಸುರಕ್ಷಾ ಪೆಟ್ಟಿಗೆಗಳನ್ನು ಒದಗಿಸುವುದು
* ಪ್ರಯಾಣಿಕರ ಚೆಕ್ಕುಗಳು ಮತ್ತು ಪತ್ತಿನ ಪತ್ರಗಳನ್ನು ಒದಗಿಸುವುದು
* ಅಂಕಿಸಂಖ್ಯೆ ಮತ್ತು ವ್ಯಾಪಾರದ ಮಾಹಿತಿಗಳನ್ನು ಸಂಗ್ರಹಿಸುವುದು
* ವಂತಿಗೆ ಭರವಸೆ ಕಾರ್ಯ
* ಇತರ ಸೇವೆಗಳು

3. ಬ್ಯಾಂಕುಗಳು ಮತ್ತು ಆರ್ಥಿಕಾಭಿವೃದ್ಧಿ (Banks and Economic Developments) :

ಪ್ರತಿಯೊಂದು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಬ್ಯಾಂಕುಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಇವು ಚಲಾವಣೆಯಲ್ಲಿರುವ ಹಣದ ಪೂರೈಕೆಯನ್ನು ನಿಯಂತ್ರಿಸುತ್ತವೆ. ಅಲ್ಲದೆ ಉತ್ಪಾದನೆಯ ಸ್ವಭಾವ ಮತ್ತು ಲಕ್ಷಣಗಳನ್ನು ಪ್ರಭಾವಿಸುತ್ತವೆ.

ಆರ್ಥಿಕಾಭಿವೃದ್ಧಿಯು ಚಲನಾತ್ಮಕ (dynamic) ವಾಗಿದ್ದು ಹಾಗೂ ನಿರಂತರ ಪ್ರಕ್ರಿಯೆ(continuous process)ಯಾಗಿದೆ. ಆರ್ಥಿಕ ಪ್ರಗತಿಯು ಬ್ಯಾಂಕನ್ನು ಅವಲಂಬಿಸಿದೆ. ಏಕೆಂದರೆ, ಆರ್ಥಿಕಾಭಿವೃದ್ಧಿಯ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹೂಡಿಕೆಯನ್ನು ಅವಲಂಬಿಸಿರುತ್ತದೆ. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಬ್ಯಾಂಕುಗಳು ವಹಿಸುವ ಪ್ರಮುಖ ಪಾತ್ರವನ್ನು ಕೆಳಗಿನ ರೇಖಾಚಿತ್ರದಲ್ಲಿ ಸಾರಾಂಶೀಕರಿಸಲಾಗಿದೆ.

Scanned with CamScanner



ರೇಖಾಚಿತ್ರ : ಬ್ಯಾಂಕಿಂಗ್ ಪದ್ಧತಿ ಮೂಲಕ ಆರ್ಥಿಕಾಭಿವೃದ್ಧಿ

ಮೇಲಿನ ರೇಖಾಚಿತ್ರದಿಂದ ಬರುವುದೇನೆಂದರೆ ಬ್ಯಾಂಕಿಂಗ್ ಪದ್ಧತಿಯ ನರ ಮಂಡಲದ ಕೇಂದ್ರಬಿಂದುವಿನಂತೆ ಸಂಪೂರ್ಣ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ.

1. **ಬಂಡವಾಳ ನಿರ್ಮಾಣ (Capital formation) :** ಬಂಡವಾಳದ ನಿರ್ಮಾಣವು ವಿವಿಧ ವರ್ಗದ ಜನರ ಉಳಿತಾಯವನ್ನು ಅವಲಂಬಿಸಿರುತ್ತದೆ. ಬ್ಯಾಂಕು ಜನರು ಉಳಿತಾಯವನ್ನು ಮಾಡುವಂತೆ ಪ್ರೇರೇಪಿಸುತ್ತದೆ. ಇದಕ್ಕಾಗಿ ಹಲವಾರು ಸವಲತ್ತುಗಳನ್ನು ಹೀಗಾಗಿ ಈ ಚೆಕ್‌ಗಳು ವಿನಿಮಯದ ಮಾಧ್ಯಮವನ್ನಾಗಿ ಕಾರ್ಯನಿರ್ವಹಿಸುತ್ತದೆ. ಪಾವತಿದಾರರಿಗೆ ಕ್ರಾಸ್ ಮಾಡಿದ ಚೆಕ್ ನೀಡಿದರೆ ಅವರ ಖಾತೆಗೆ ಜಮಾ ಮಾಡುತ್ತದೆ. ಅದು ನೀಡುತ್ತದೆ. ಅದರಿಂದ ಸೋಮಾರಿಯಾದ ಮತ್ತು ಮಲಗಿದ ಬಂಡವಾಳವು ಉತ್ಪಾದನಾ ಉದ್ದೇಶಗಳಿಗೆ ಸಹಾಯಕಾರಿಯಾಗುವಂತೆ ಮಾಡುತ್ತದೆ.

2. **ಪತ್ತು ನಿರ್ಮಾಣ (Credit Creation) :** ಪತ್ತು ನಿರ್ಮಾಣವು ವಾಣಿಜ್ಯ ಬ್ಯಾಂಕಿನ ಪ್ರಮುಖ ಕಾರ್ಯವಾಗಿದೆ. ಇದು ಆರ್ಥಿಕ ದೃಷ್ಟಿಯಿಂದಲೂ ಅತಿ ಮಹತ್ವವಾಗಿದೆ. ಬ್ಯಾಂಕುಗಳು ಪತ್ತು ನಿರ್ಮಾಣ ಮಾಡುವ ಕೈಗಾರಿಕೆಗಳೆಂದು ಕರೆಯುತ್ತಾರೆ. ಇದರಿಂದ ಹೂಡಿಕೆದಾರರಿಗೆ ನೆರವು ನೀಡುತ್ತದೆ.

3. **ಸಂಘಟಿತ ಮತ್ತು ಅಸಂಘಟಿತ ವಲಯದ ಜೋಡಣೆ (Link between organised and unorganised sector) :** ಭಾರತದ ಹಣದ

Scanned with CamScanner

ಮಾಡುತ್ತಿಯು ಸಂಘಟಿತ ಮತ್ತು ಅಸಂಘಟಿತ ವಲಯಗಳನ್ನು ಹೊಂದಿವೆ. ಇವೆರಡು ವಲಯಗಳು ಆರ್ಥಿಕಾಭಿವೃದ್ಧಿಗೆ ಅವಶ್ಯಕ. ಅರ್ಥವ್ಯವಸ್ಥೆಯ ನಿಯಂತ್ರಣವಾಗಿದ್ದ ಬ್ಯಾಂಕು ಸಂಘಟಿತ ಮತ್ತು ಅಸಂಘಟಿತ ವಲಯಗಳನ್ನು ಆರ್ಥಿಕಾಭಿವೃದ್ಧಿ ಸಾಧನೆಗಾಗಿ ಇವೆರಡನ್ನು ಜೋಡಿಸುತ್ತದೆ.

4. **ದೀರ್ಘಾವಧಿ ಸಾಲಗಳು (Long term Loans) :** ಕೈಗಾರಿಕಾಭಿವೃದ್ಧಿಯ ಆರ್ಥಿಕಾಭಿವೃದ್ಧಿಗೆ ಮೂಲಕವಾಗಿದೆ. ಕೈಗಾರಿಕಾಭಿವೃದ್ಧಿಯು ಸಂಪೂರ್ಣವಾಗಿ ದೀರ್ಘಾವಧಿ ಸಾಲವನ್ನು ಅವಲಂಬಿಸಿರುತ್ತದೆ. ಈ ಸಾಲಗಳನ್ನು ಬ್ಯಾಂಕು ನೀಡುತ್ತದೆ.

5. **ಕೃಷಿಗೆ ಸಹಾಯ (Helps to Agriculture) :** ದೇಶದ ಆರ್ಥಿಕಾಭಿವೃದ್ಧಿಯು ಕೇವಲ ಕೈಗಾರಿಕಾಭಿವೃದ್ಧಿಯನ್ನು ಅವಲಂಬಿಸಿರುವುದಿಲ್ಲ. ಅಲ್ಲಿ ಕೃಷಿಯನ್ನು ಸಹ ಅವಲಂಬಿಸಿರುತ್ತದೆ. ಕೃಷಿ ವಲಯವು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ. 25ರಷ್ಟು ಪಾಲು ಸಲ್ಲಿಸುತ್ತದೆ. ಹೀಗಾಗಿ ಕೃಷಿ ವಲಯಕ್ಕೆ ಬಹಳಷ್ಟು ಸಾಲ ಸೌಲಭ್ಯವನ್ನು ಒದಗಿಸುತ್ತದೆ.

6. **ಸಣ್ಣ ಕೈಗಾರಿಕೆಗಳಿಗೆ ಸಹಾಯ (Helping small scale industries) :** ಸಣ್ಣ ಕೈಗಾರಿಕೆಗಳು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತದೆ. ಉದ್ಯೋಗವನ್ನು ಹೆಚ್ಚಿಸುವುದು ಹಾಗೂ ಉತ್ಪಾದನೆಯನ್ನು ಅಧಿಕಗೊಳಿಸುವುದು ಸಣ್ಣ ಕೈಗಾರಿಕೆಗಳ ಮುಖ್ಯ ಉದ್ದೇಶವಾಗಿದೆ. ಈ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಬ್ಯಾಂಕು, ಹಣಕಾಸಿನ ಹಾಗೂ ತಾಂತ್ರಿಕ ನೆರವನ್ನು ಒದಗಿಸುತ್ತದೆ.

7. **ಉದ್ದಿಮೆದಾರರ ಅಭಿವೃದ್ಧಿ (Development of enterpreneur) :** ಸಾಹಸಿ ಉದ್ದಿಮೆದಾರರ ಬೆಳವಣಿಗಾಗಿ ಬ್ಯಾಂಕು ಉತ್ತೇಜನ ನೀಡುತ್ತದೆ. ಇವರಿಗಾಗಿ ಹಲವಾರು ಅಭಿವೃದ್ಧಿಯ ಯೋಜನೆಗಳನ್ನು ಕೈಗೊಳ್ಳುತ್ತದೆ. ಈ ಉದ್ದಿಮೆದಾರರು ದೇಶದ ಉತ್ಪನ್ನ ಮತ್ತು ಉದ್ಯೋಗವನ್ನು ಅಧಿಕಗೊಳಿಸುತ್ತಾರೆ.

8. **ಚೆಕ್ ಪದ್ಧತಿ (Cheque system) :** ಬ್ಯಾಂಕು ತನ್ನ ಗ್ರಾಹಕರಿಗೆ ಚೆಕ್ಕುಗಳನ್ನು ಒದಗಿಸುತ್ತದೆ. ಈ ಚೆಕ್‌ಗಳನ್ನು ಅವರು ಮರು ಪಾವತಿಗಾಗಿ ಬಳಸಬಹುದಾಗಿದೆ. ಹೀಗಾಗಿ ಈ ಚೆಕ್‌ಗಳು ವಿನಿಮಯದ ಮಾಧ್ಯಮವನ್ನಾಗಿ ಕಾರ್ಯನಿರ್ವಹಿಸುತ್ತದೆ. ಖಾತೆದಾರರಿಗೆ ಕ್ರಾಸ್ ಮಾಡಿದ ಚೆಕ್ ನೀಡಿದರೆ ಅವರ ಖಾತೆಗೆ ಜಮಾ ಮಾಡುತ್ತದೆ.

Scanned with CamScanner

9. **ರಾಷ್ಟ್ರೀಯ ಉಳಿತಾಯ (National Savings) :** ಬ್ಯಾಂಕುಗಳು ಹಲವಾರು ಚಾಲನೆಗಳ ಮೂಲಕ ಜನರ ಉಳಿತಾಯವನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸುತ್ತದೆ. ಈ ಉಳಿತಾಯವು ಉತ್ಪಾದನಾ ಚಟುವಟಿಕೆಗಳಿಗೆ ವೆಚ್ಚ ಮಾಡಲಾಗುತ್ತದೆ.

10. **ಸಮಗ್ರ ಅಧೋರಚನೆಯ ಸೌಕರ್ಯ (Comprehensive infrastructual Facilities) :** ಬ್ಯಾಂಕುಗಳ ದೇಶದ ಅಧೋರಚನೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಸಾಮಾಜಿಕ, ಶೈಕ್ಷಣಿಕ, ಹಣಕಾಸಿನ ಮತ್ತು ಇತರ ಧೋರಚನೆಯನ್ನು ಅಭಿವೃದ್ಧಿಗೊಳಿಸುತ್ತದೆ. ಇದರಿಂದ ದೇಶದ ಆರ್ಥಿಕಾ-ಭಿವೃದ್ಧಿಯಾಗುತ್ತದೆ.

11. **ವ್ಯಾಪಾರ (Trade) :** "ವ್ಯಾಪಾರವು ಆರ್ಥಿಕಾಭಿವೃದ್ಧಿ ಇಂಜಿನು" ಎಂದೇ ಹೇಳಲಾಗಿದೆ. ಬ್ಯಾಂಕುಗಳ ದೇಶದ ರಫ್ತು ಹೆಚ್ಚಿಸುವಂತೆ ಕ್ರಮಗಳನ್ನು ಜರುಗಿಸುತ್ತದೆ. ರಫ್ತುದಾರರಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತದೆ. ಇದರಿಂದ ವ್ಯಾಪಾರದ ಕಾರ್ಯಗಳು ದೇಶಕ್ಕೆ ಅನುಕೂಲವಾಗುವಂತೆ ಮಾಡುತ್ತದೆ.

12. **ವ್ಯಾಪಾರ ಚಕ್ರದ ಪರಿಣಾಮಗಳನ್ನು ನಿವಾರಿಸುತ್ತದೆ (Mitigating the effects of trade cycles) :** ಹಣದುಬ್ಬರ ಮತ್ತು ಕುಗ್ಗು ಪ್ರಸರಣಗಳನ್ನು ವ್ಯಾಪಾರ ಚಕ್ರಗಳೆಂದು ಕರೆಯುತ್ತಾರೆ. ಇವೆರಡೂ ನಿಯಂತ್ರಿಸುವುದು ಅವಶ್ಯಕ. ಬ್ಯಾಂಕು ಅವಶ್ಯಕತೆ ಬಿದ್ದಾಗ ಹಣದುಬ್ಬರವಾಗಲೀ ಅಥವಾ ಕುಗ್ಗು ಪ್ರಸರಣವಾಗಲೀ ನಿಯಂತ್ರಿಸಿ ಇದರಿಂದ ಉಂಟಾಗುವ ಪರಿಣಾಮಗಳನ್ನು ನಿಯಂತ್ರಿಸುತ್ತದೆ.

13. **ಪ್ರಾದೇಶಿಕ ಅಭಿವೃದ್ಧಿ (Regional development) :** ಸಂಗ್ರಹಿಸಿದ ಹಣವನ್ನು ಹಿಂದುಳಿದ ಪ್ರದೇಶದ ಅಭಿವೃದ್ಧಿಗಾಗಿ ವಿನಿಯೋಗಿಸಬಹುದಾಗಿದೆ. ಹಿಂದುಳಿದ ಪ್ರದೇಶದ ಕೈಗಾರಿಕಾ, ಕುಶಲ ಕರ್ಮಿಗಳಿಗೆ, ಉದ್ದಿಮೆದಾರರಿಗೆ ಸಾಲ ಸೌಲಭ್ಯವನ್ನು ಒದಗಿಸುವುದರಿಂದ ಪ್ರಾದೇಶಿಕ ಅಭಿವೃದ್ಧಿ ಸಾಧಿಸಬಹುದಾಗಿದೆ.

14. **ಸಾಮಾಜಿಕ ಬದಲಾವಣೆ (Social change) :** ಬ್ಯಾಂಕುಗಳು ಪ್ರಮುಖ ವಲಯಗಳಾದ ಕೃಷಿ, ಕೈಗಾರಿಕೆ, ವ್ಯಾಪಾರ, ಕುಶಲಕಾರ್ಮಿಕ ಮುಂತಾದವರಿಗೆ ಸಾಲ ಸೌಲಭ್ಯಗಳನ್ನು ನೀಡುವುದರಿಂದ ಸಾಮಾಜಿಕ ಬದಲಾವಣೆ ತರಬಹುರು.

15. **ಹಣಕಾಸಿನ ನೀತಿಯ ಅನುಷ್ಠಾನ (Implementation of monetary policy) :** ಹಣಕಾಸಿನ ನೀತಿಯನ್ನು ಅನುಷ್ಠಾನಗೊಳಿಸುವ ಮುಖ್ಯ ಸಂಸ್ಥೆಯೇ ಬ್ಯಾಂಕು. ಹೀಗೆ ಬ್ಯಾಂಕು ದೇಶದ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ.

Scanned with CamScanner

4. ವಾಣಿಜ್ಯ ಬ್ಯಾಂಕಿನ ಅಧಾವೆ ಪತ್ರ (Balance Sheet of a Commercial Bank)

ಒಂದು ನಿರ್ದಿಷ್ಟ ಅವಧಿಯಲ್ಲಿ ವಾಣಿಜ್ಯ ಬ್ಯಾಂಕಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತೋರಿಸುವ ಪಟ್ಟಿಗೆ (ಅಧಾವೆ ಪತ್ರ) ಅಥವಾ ಲೇಣಿ-ದೇಣಿ ಎಂದು (Balance Sheet) ಕರೆಯುತ್ತಾರೆ. ಸಾಮಾನ್ಯವಾಗಿ ವ್ಯವಹಾರದ ವರ್ಷದ ಕೊನೆಯ ದಿನಾಂಕದಂದು ತಯಾರಿಸುತ್ತವೆ. ಈ (Sheet) ಪಟ್ಟಿಯಲ್ಲಿ ಎರಡು ಭಾಗಗಳಿರುತ್ತವೆ. ಪಟ್ಟಿಯ ಎಡಭಾಗದಲ್ಲಿ ಹೊಣೆಗಳ (Liabitities) ಮೊತ್ತವನ್ನು ಮತ್ತು ಬಲಭಾಗದಲ್ಲಿ ಆಸ್ತಿಗಳ (Assets) ಮೌಲ್ಯವನ್ನು ವಿವರವಾಗಿ ತೋರಿಸಲಾಗುತ್ತದೆ. ಬ್ಯಾಂಕು ತನ್ನ ಷೇರುದಾರರಿಗೆ ಮತ್ತು ಠೇವಣಿದಾರರಿಗೆ ಕೊಡಬೇಕಾಗಿರುವ ಹಣವು ಅದರ ಹೊಣೆಗಾರಿಕೆಯಾಗಿರುತ್ತದೆ. ಬ್ಯಾಂಕು ಇತರರಿಂದ ಕೊಡಬೇಕಾಗಿರುವ ಹಣವು ಅದರ ಹೊಣೆಗಾರಿಕೆಯಾಗಿರುತ್ತದೆ. ಬ್ಯಾಂಕು ಇತರರಿಂದ ಪಡೆಯುವ ಹಣ ಮತ್ತು ಬಡ್ಡಿ, ಲಾಭ ಹಾಗೂ ಬ್ಯಾಂಕಿನ ಹಿತಾಸಕ್ತಿಗಳನ್ನು ರಕ್ಷಿಸುವ ಕಲಮುಗಳು ಅದರ ಆಸ್ತಿಗಳಾಗಿವೆ.

ಅಧಾವೆ ಪತ್ರಿಕೆಯು ಒಂದು ಕನ್ನಡಿ ಇದ್ದಂತೆ. ಇದು ವಾಣಿಜ್ಯ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಯನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಬ್ಯಾಂಕು ಯಾವ ಯಾವ ಮೂಲಗಳಿಂದ ಹಣವನ್ನು ಪಡೆಯುತ್ತಿದೆ ಹಾಗೂ ಅದನ್ನು ಯಾವ ರೀತಿ ವಿನಿಯೋಗಿಸಿ ಆದಾಯವನ್ನು ಗಳಿಸುತ್ತದೆ ಎಂಬುದನ್ನು ಈ ಪಟ್ಟಿಯು ತೋರಿಸುತ್ತದೆ. ಅಲ್ಲದೆ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಯು ಭದ್ರವಾಗಿದೆಯೇ ಇಲ್ಲವೇ ಎಂಬುದೂ ಸಹ ಇದರಿಂದ ತಿಳಿಯುತ್ತದೆ. ಬ್ಯಾಂಕಿನ ಲಾಭದಾಯಕತೆಯ ಶಕ್ತಿ, ಅದರ ಹಣ ವಿನಿಯೋಗದ ನೀತಿ ಮತ್ತು ಅದರ ವ್ಯವಹಾರದ ಸಾಮರ್ಥ್ಯ ಮೊದಲಾವುಗಳನ್ನು ಈ ಅಧಾವೆ ಪತ್ರವು ಸ್ಪಷ್ಟವಾಗಿ ತೋರಿಸುತ್ತದೆ. **ಜಾಫ್ರಿಕ್ರೌಥರ (Geoffrey Crowther)** ರ ಪ್ರಕಾರ, **"ಬ್ಯಾಂಕಿನ ಎಲ್ಲಾ ವ್ಯವಹಾರಗಳು ಅದರ ಅಧಾವೆ ಪತ್ರಿಕೆಯಲ್ಲಿದೆ. ಅಧಾವೆ ಪತ್ರಿಕೆಯ ಒಂದು ಪ್ರಮುಖ ಗುಣವೆಂದರೆ, ಬ್ಯಾಂಕು ಯಾವ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತದೆಂಬುವುದನ್ನು ಪ್ರದರ್ಶಿಸುತ್ತದೆ."**

ಬ್ಯಾಂಕಿನ ಅಧಾವೆ ಪತ್ರಿಕೆಯಲ್ಲಿ ತೋರಿಸಿದ ಆಸ್ತಿಗಳ ಒಟ್ಟು ಮೌಲ್ಯವು ಅದರ ಹೊಣೆಗಾರಿಕೆಗಳ ಒಟ್ಟು ಮೊತ್ತಕ್ಕೆ ಸಮವಾಗಿರುತ್ತದೆ. ಆದರೆ ಈ ಸಮಾನತೆಯ ನಿಯಮ ಕೇವಲ ಬ್ಯಾಂಕುಗಳಿಗೆ ಅನ್ವಯಿಸುವುದಿಲ್ಲ. ಇದು ಪ್ರತಿಯೊಂದು ವ್ಯವಹಾರಿ ಸಂಸ್ಥೆಗೂ ಅನ್ವಯಿಸುತ್ತದೆ.

Scanned with CamScanner

ವಾಣಿಜ್ಯ ಬ್ಯಾಂಕಿನ ಒಂದು ಕಲ್ಪಿತ ಅಧಾವೆ ಪತ್ರಿಕೆಯನ್ನು ಕೆಳಗೆ ಚಿತ್ರಿಸಲಾಗಿದೆ.

ವಾಣಿಜ್ಯ ಬ್ಯಾಂಕಿನ ಕಲ್ಪಿತ ಅಧಾವೆ ಪತ್ರಿಕೆ : [Hypothetical Balance Sheet of a Commercial Bank)

ಹೊಣೆಗಳು (Liabilities)	ಆಸ್ತಿಗಳು (Assets)
1 ಷೇರು ಬಂಡವಾಳ	1. ಕೈಯಲ್ಲಿರುವ ನಗದು ಹಣ ಕೇಂದ್ರ ಬ್ಯಾಂಕಿನಲ್ಲಿರುವ ಶಿಲ್ಕು ಇತರ ಬ್ಯಾಂಕುಗಳಲ್ಲಿರುವ ಶಿಲ್ಕು
2. ಕಾಯ್ದಿಟ್ಟ ನಿಧಿ	2. ಕರೆ ಹಣ ಮತ್ತು ಅಲ್ಪಕಾಲ ಮುನ್ಸೂಚನೆಯ ಹಣ
3. ಠೇವಣಿಗಳು	3. ಪಟ್ಟಾಯಿಸಿದ ಹುಂಡಿಗಳು
4. ಇತರ ಬ್ಯಾಂಕಿನಿಂದ ಪಡೆದ ಸಾಲಗಳು	4. ಸಾಲಗಳು ಮತ್ತು ಮುಂಗಡಗಳು
5. ಒಪ್ಪಿಗೆ ಮತ್ತು ಸಮ್ಮತಿಗಳು	5. ಗ್ರಾಹಕರ ಒಪ್ಪಿಗೆಗಳು ಮತ್ತು ಸಮ್ಮತಿಗಳು
6. ನಿವ್ವಳ ಲಾಭ	6. ಹೂಡಿಕೆಗಳು
	7. ಇತರ ಆಸ್ತಿಗಳು ಕಟ್ಟಡ, ಪೀಠೋಪಕರಣ, ಕಚೇರಿ ಉಪಕರಣ ಇತ್ಯಾದಿ
ಒಟ್ಟು ರೂ.	ಒಟ್ಟು ರೂ.

ಹೊಣೆಗಾರಿಕೆಗಳು (Liabilities): ಅಧಾವೆ ಪತ್ರಿಕೆಯ ಹೊಣೆಗಾರಿಕೆಯ ವಿಭಾಗವು ವಾಣಿಜ್ಯ ಬ್ಯಾಂಕು ಹಣವನ್ನು ಎತ್ತುವ ವಿಧಾನವನ್ನು ತೋರಿಸುತ್ತದೆ. ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ಕೆಳಗೆ ವಿವರಿಸಲಾಗಿದೆ.

1. **ಷೇರು ಬಂಡವಾಳ (Share Capital) :** ಇದು ಬ್ಯಾಂಕಿನ ಒಟ್ಟು ಬಂಡವಾಳಕ್ಕೆ ಷೇರುದಾರರು ನೀಡಿದ ಹಣವಾಗಿರುತ್ತದೆ. ಈ ಹಣವನ್ನು ಷೇರುದಾರರಿಗೆ ಮರುಪಾವತಿ ಮಾಡಲು ಬ್ಯಾಂಕು ಹೊಣೆಗಾರನಾಗಿರುತ್ತದೆ.

2. **ಕಾಯ್ದಿಟ್ಟ ನಿಧಿ (Reserved Fund) :** ಹಿಂದಿನ ವರ್ಷಗಳಲ್ಲಿ ಬ್ಯಾಂಕುಗಳಿಸಿದ ಲಾಭವನ್ನು ಪೂರ್ತಿಯಾಗಿ ಷೇರುದಾರರಿಗೆ ಹಂಚದೆ ಸಂಚಿತವಾಗಿರುವ ಹಣವೇ ಕಾಯ್ದಿಟ್ಟ ನಿಧಿ. ಇದು ಷೇರುದಾರರಿಗೆ ಸೇರಬೇಕಾಗಿರುವ ಲಾಭಾಂಶವಾಗಿದೆ. ಕಾನೂನಿನ ಪ್ರಕಾರ, ಠೇವಣಿದಾರರ ಹಿತಾಸಕ್ತಿಯನ್ನು ರಕ್ಷಿಸಲು ಠೇವಣಿಗಳ ಶೇಕಡಾ 10ರಷ್ಟನ್ನು ಬ್ಯಾಂಕುಗಳು ಕಾಯ್ದಿಟ್ಟ ನಿಧಿಯಲ್ಲಿ ಸಂಗ್ರಹಿಸಬೇಕಾಗುತ್ತದೆ.

Scanned with CamScanner

3. **ಠೇವಣಿಗಳು (Deposits) :** ಸಾರ್ವಜನಿಕರು ಬ್ಯಾಂಕಿನಲ್ಲಿ ಉಳಿತಾಯ ಮಾಡಿ ಇಟ್ಟಿರುವ ಹಣವೇ ಠೇವಣಿ, ಠೇವಣಿಗಳಲ್ಲಿ ಚಾಲ್ತಿ ಠೇವಣಿಗಳು, ಉಳಿತಾಯ ಠೇವಣಿಗಳು ಮತ್ತು ಮುದ್ದತ್ತಿನ ಠೇವಣಿಗಳು ಎಂಬ ಮೂರು ಬಗೆಗಳಿವೆ. ಠೇವಣಿಯ ಹಣವನ್ನು ಠೇವಣಿದಾರರಿಗೆ ಬಡ್ಡಿ ಸಹಿತ ಹಿಂದಿರುಗಿಸಬೇಕಾಗುತ್ತದೆ. ಇದು ಬ್ಯಾಂಕಿನ ಪ್ರಮುಖ ಹೊಣೆಗಾರಿಕೆಯಾಗಿದೆ.

4. **ಇತರ ಬ್ಯಾಂಕುಗಳಿಂದ ಪಡೆದ ಸಾಲಗಳು (Borrowing from other Banks):** ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಬ್ಯಾಂಕು ತಾತ್ಕಾಲಿಕ ಅವಧಿಗೆ ಇತರ ಬ್ಯಾಂಕುಗಳಿಂದ ಸಾಲ ಪಡೆದಿರುತ್ತದೆ. ಈ ಸಾಲವನ್ನು ಹಿಂತಿರುಗಿಸುವುದು ಬ್ಯಾಂಕಿನ ಹೊಣೆಯಾಗಿದೆ.

5. **ಒಪ್ಪಿಗೆಗಳು ಮತ್ತು ಸಮ್ಮತಿಗಳು (Acceptance and Endorsements):** ತನ್ನ ಗ್ರಾಹಕರ ಪರವಾಗಿ ಬ್ಯಾಂಕು ಹಣಕೊಡಲು ಸಮ್ಮತಿಸಿ, ರುಜು ಹಾಕಿದ ಹಂಡಿಗಳು ಬ್ಯಾಂಕಿನ ಹೊಣೆಗಾರಿಕೆಯನ್ನು ತೋರಿಸುತ್ತದೆ. ಸಾಲಗಾರನಾಗಿ ಇತರರಿಗೆ ಹುಂಡಿಯನ್ನು ಕೊಟ್ಟಿರುವ ತನ್ನ ಗ್ರಾಹಕನು ವಾಯ್ದೆ ತೀರುವುದರೊಳಗಾಗಿ ಆ ಮತ್ತೊವನ್ನು ಪಾವತಿ ಮಾಡದಿದ್ದರೆ ಅವನ ಪರವಾಗಿ ತಾನು ಪಾವತಿ ಮಾಡುತ್ತೇನೆಂದು ಬ್ಯಾಂಕು ಒಪ್ಪಿ ರುಜು ಹಾಕಿರುತ್ತದೆ.

ಆಸ್ತಿಗಳು (Assest): ಬ್ಯಾಂಕು ಆದಾಯವನ್ನು ಗಳಿಸಲು ಸಾಧ್ಯವಿರುವ ಎಲ್ಲಾ ಬಾಬ್ತುಗಳು ಮತ್ತು ಇತರರಿಂದ ಬರಬೇಕಾದ ನಗದು ಹಣವು ಅದರ ಆಸ್ತಿಗಳಾಗಿವೆ.

1. **ಕೈಯಲ್ಲಿರುವ ನಗದು ಹಣ (Cash on hand) :** ತಾನು ಠೇವಣಿಯಾಗಿ ಸ್ವೀಕರಿಸಿದ ಪೂರ್ತಿ ಹಣವನ್ನು ಬ್ಯಾಂಕು ಸಾಲವಾಗಿ ನೀಡುವುದಿಲ್ಲ. ಠೇವಣಿದಾರರು ಕೇಳಿದಾಗ ಅವರಿಗೆ ಹಿಂದಿರುಗಿಸಲು ಸ್ವಲ್ಪ ಹಣವನ್ನು ನಗದು ರೂಪದಲ್ಲಿಟ್ಟು ಕೊಂಡಿರುತ್ತದೆ. ಸ್ವಲ್ಪ ಹಣವನ್ನು ಇತರ ಬ್ಯಾಂಕುಗಳಲ್ಲಿಯೂ ಠೇವಣಿಯಾಗಿ ಇಟ್ಟಿರುವ ರೂಢಿಯಿದೆ. ಜೊತೆಗೆ ಠೇವಣಿಯ ಮೊತ್ತದ ಸ್ವಲ್ಪ ಪ್ರಮಾಣವನ್ನು ಕೇಂದ್ರ ಬ್ಯಾಂಕಿನಲ್ಲಿ ಇಟ್ಟಿರಬೇಕಾಗುತ್ತದೆ. ಪ್ರತಿದಿನ ಠೇವಣಿದಾರರು ಹಣವನ್ನು ಇಡುತ್ತಿರುತ್ತಾರೆ ಮತ್ತೆ ಕೆಲವರು ತಮ್ಮ ಹಣವನ್ನು ಮರಳಿ ಪಡೆಯುತ್ತಿರುತ್ತಾರೆ. ಬ್ಯಾಂಕಿಗೆ ಬರುವ ಹಣ ಮತ್ತು ಹೋಗುವ ಹಣ ಸಮನಾಗಿರುವಂತೆ ಬ್ಯಾಂಕು ತನ್ನ ವ್ಯವಹಾರವನ್ನು ಹೊಂದಿಸಿಕೊಂಡಿರುತ್ತದೆ. ಅನಾವಶ್ಯಕವಾಗಿ ಹೆಚ್ಚು ಹಣವನ್ನು ನಗದು ರೂಪದಲ್ಲಿಟ್ಟು ಕೊಳ್ಳುವುದಿಲ್ಲ. ಹಾಗೆ ಇಟ್ಟುಕೊಂಡರೆ ಬ್ಯಾಂಕಿಗೆ ಬರುವ ಲಾಭ ಕಡಿಮೆಯಾಗುತ್ತದೆ.

Scanned with CamScanner

2. **ಕರೆ ಹಣ ಮತ್ತು ಅಲ್ಪಕಾಲಿಕ ಮುನ್ಸೂಚನೆಯ ಹಣ (Money at Call and Short Notices) :** ಅತ್ಯಲ್ಪ ಕಾಲಾವಧಿಗೆ ಬ್ಯಾಂಕು ನೀಡಿರುವ ಸಾಲಗಳು ಮತ್ತು ಮುಂಗಡಗಳು ಬ್ಯಾಂಕಿನ ಆಸ್ತಿಗಳಾಗಿವೆ. ಸಾಮಾನ್ಯವಾಗಿ ಈ ಸಾಲಗಳು ಬ್ಯಾಂಕುಗಳಿಗೆ, ಹುಂಡಿ ದಲ್ಲಾಳಿಗಳಿಗೆ ಮತ್ತು ಪಟ್ಟಾ ಅಂಗಡಿಗಳಿಗೆ (Discount Houses) ನೀಡಲಾಗುತ್ತದೆ. ಇವುಗಳ ಮೇಲಿನ ಬಡ್ಡಿ ಅತಿ ಕಡಿಮೆ. ಬ್ಯಾಂಕು ಮುನ್ಸೂಚನೆ ಕೊಟ್ಟ ಕೂಡಲೇ ಈ ಸಾಲಗಳನ್ನು ಮರುಪಾವತಿ ಮಾಡಬೇಕಾಗುತ್ತದೆ.

3. **ವಟ್ಟಾಯಿಸಿದ ಹುಂಡಿಗಳು (Bills Discounted) :** ಸಾಮಾನ್ಯವಾಗಿ ಮೂರು ತಿಂಗಳ ವಾಯ್ದೆಯ ವಿನಿಮಯ ಹುಂಡಿಗಳನ್ನು ವ್ಯಾಪಾರಸ್ಥರಿಂದ ಖರೀದಿಸಿ ಅವರಿಗೆ ಬ್ಯಾಂಕು ಸಾಲ ನೀಡುತ್ತದೆ. ಸಾಲವನ್ನು ನೀಡುವಾಗ ಹಣವನ್ನು ಮುರಿದು ಕೊಡುತ್ತದೆ. ಆದುದರಿಂದ ವ್ಯಾಪಾರಸ್ಥರಿಂದ ವಟ್ಟಾಯಿಸಿಕೊಂಡಿರುವ ಹುಂಡಿಗಳು ಬ್ಯಾಂಕಿನ ಆಸ್ತಿಗಳಾಗಿರುತ್ತವೆ. ವಾಯ್ದೆ ತೀರಿದ ಕೂಡಲೇ ಬ್ಯಾಂಕು ಹಣವನ್ನು ಪಡೆದು ಹುಂಡಿಯನ್ನು ಹಿಂತಿರುಗಿಸುತ್ತದೆ. ವಾಯಿದೆ ತೀರುವ ಮೊದಲೆ ಬ್ಯಾಂಕಿಗೆ ಹಣ ಬೇಕಾಗಿದ್ದರೆ ಹುಂಡಿಯನ್ನು ಕೇಂದ್ರ ಬ್ಯಾಂಕಿನಲ್ಲಿ ಮರುವಟ್ಟಾಯಿಸಿಕೊಂಡು ಸಾಲ ಪಡೆಯುತ್ತದೆ.

4. **ಸಾಲಗಳು ಮತ್ತು ಮುಂಗಡಗಳು (Loans and Advances) :** ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡುತ್ತವೆ. ಸರಿಯಾದ ಭದ್ರತೆ (Security) ಆಧಾರದ ಮೇಲೆ ಮತ್ತು ಸಾಲಾಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಬ್ಯಾಂಕುಗಳು ಸಾಲ ನೀಡುತ್ತವೆ. ಇವು ಬ್ಯಾಂಕುಗಳಿಗೆ ಅಧಿಕ ಬಡ್ಡಿಯನ್ನು ಗಳಿಸಿಕೊಡುತ್ತವೆ.

5. **ಗ್ರಾಹಕರ ಪರವಾಗಿ ಒಪ್ಪಿಗೆಗಳು ಮತ್ತು ಸಮ್ಮತಿಗಳು (Acceptance and Endoresments on behalf of Customers) :** ಬೇರೆ ಬ್ಯಾಂಕುಗಳಿಂದ ಗ್ರಾಹಕರ ಹುಂಡಿಗಳನ್ನು ಸ್ವೀಕರಿಸಿ, ಅವರಿಗೆ ಸಾಲ ನೀಡುವಂತೆ ಬ್ಯಾಂಕು ಸಮ್ಮತಿಸಿರಬಹುದು. ಇದು ಬ್ಯಾಂಕಿನ ಒಂದು ಆಸ್ತಿ ಅಥವಾ ಹೊಣೆಗಾರಿಕೆಯಾಗಿದೆ. ಏಕೆಂದರೆ ಗ್ರಾಹಕರ ಪರವಾಗಿ ಹುಂಡಿಗಳನ್ನು ಸ್ವೀಕರಿಸಿ ಸಾಲ ನೀಡಲು ಸಮ್ಮತಿಸುವ ಮೂಲಕ ಬ್ಯಾಂಕು ಗ್ರಾಹಕರ ಪರವಾಗಿ ಹುಂಡಿಗಳನ್ನು ಸ್ವೀಕರಿಸಿ ಸಾಲ ನೀಡಲು ಸಮ್ಮತಿಸುವ ಮೂಲಕ ಬ್ಯಾಂಕು ಗ್ರಾಹಕರಿಗೆ ಸಾಲ ನೀಡಿದಂತೆಯೇ ಆಗುತ್ತದೆ. ವಾಯಿದೆ ಮುಗಿದ ಕೂಡಲೇ ಗ್ರಾಹಕನು ಹಣ ಮರುಪಾವತಿ ಮಾಡಲು ತಪ್ಪಿದರೆ ಅವನ ಪರವಾಗಿ ಬ್ಯಾಂಕು ಮರುಪಾವತಿ ಮಾಡುತ್ತದೆ. ನಂತರ ಆ ಹಣವನ್ನು ಗ್ರಾಹಕನಿಂದ ವಸೂಲಿ ಮಾಡುತ್ತದೆ. ಇದರಿಂದ ಬ್ಯಾಂಕಿಗೆ ಸ್ವಲ್ಪ ಕಮಿಷನ್ ರೂಪದಲ್ಲಿ ಆದಾಯ ಬರುತ್ತದೆ.

Scanned with CamScanner

6. **ಹೂಡಿಕೆಗಳು (Investments)**: ಬ್ಯಾಂಕು ಸರ್ಕಾರದ ಭದ್ರತೆಗಳು, ಕಂಪನಿಯ ಶೇರುಗಳು ಮತ್ತು ಸಾಲ ಪತ್ರಗಳನ್ನು ಕೊಳ್ಳುತ್ತದೆ. ಇವುಗಳನ್ನು ಕೊಳ್ಳುವುದರಿಂದ ಬ್ಯಾಂಕು ಲಾಭಗಳಿಸುತ್ತದೆ. ಆದ್ದರಿಂದ ಇವುಗಳ ಮೇಲೆ ಏನಿಯೋಗಿಸುವ ಹಣವು ಬ್ಯಾಂಕಿನ ಹೂಡಿಕೆಯಾಗುತ್ತದೆ.

7. **ಇತರ ಬಾಬ್ತುಗಳು (Other Items)** : ವಾಣಿಜ್ಯ ಬ್ಯಾಂಕಿನ ಕಟ್ಟಡ, ಪೀಠೋಪಕರಣ, ಕಚೇರಿ ಉಪಕರಣ ಇತ್ಯಾದಿ ಬ್ಯಾಂಕಿನ ಆಸ್ತಿಗಳಾಗಿರುತ್ತವೆ. ಇವುಗಳ ಮಾರಾಟದಿಂದ ಹಣ ಪಡೆದುಕೊಳ್ಳಬಹುದಾಗಿದೆ. ಆದ್ದರಿಂದ ಇವು ಯಾವಾಗಲೂ ಬ್ಯಾಂಕಿನ ಆದಾಯದ ಮೂಲಗಳಾಗಿವೆ. ಈ ಆಸ್ತಿಗಳನ್ನು ಬಾಡಿಗೆಗೆ ಕೊಡುವುದರಿಂದಲೂ ಬ್ಯಾಂಕು ಆದಾಯವನ್ನು ಗಳಿಸಬಹುದಾಗಿದೆ.

5. ಬಂಡವಾಳ (ಪೊರ್ಟ್‌ಫೋಲಿಯೋ) ನಿರ್ವಹಣೆ (Portfolio Management)

ಹೂಡಿಕೆಯ ಸಾಧನಗಳಾದ ಶೇರುಗಳು, ಮ್ಯೂಚುವಲ್ ಫಂಡ್ಸ್‌ಗಳು, ಬಾಂಡ್‌ಗಳು, ಸ್ಥಿರ ಠೇವಣಿಗಳು ಮತ್ತು ಇತರ ನಗದು ಸಮಾನತೆಗಳಂತಹ ಸಂಗ್ರಹಕ್ಕೆ ಪೊರ್ಟ್‌ಫೋಲಿಯೋ ಬಂಡವಾಳ (Portfolio) ಎಂದು ಕರೆಯುತ್ತಾರೆ.

ಅಪಾಯದ ಸಮತೋಲನದೊಂದಿಗೆ ಗರಿಷ್ಠ ಆದಾಯವನ್ನು ಗಳಿಸಲು ಸರಿಯಾದ ಪ್ರಮಾಣದಲ್ಲಿ ಸರಿಯಾದ ಹೂಡಿಕೆ ಸಾಧನಗಳನ್ನು ಆಯ್ಕೆ ಮಾಡುವ ಕಲೆಗೆ ಬಂಡವಾಳ ನಿರ್ವಹಣೆ ಅಥವಾ Portfolio Management ಎಂದು ಕರೆಯುತ್ತಾರೆ.

ಬೇರೆ ರೀತಿಯಲ್ಲಿ ಹೇಳುವುದಾದರೆ ಸ್ವತ್ತು ಅಥವಾ ಆಸ್ತಿ (assets) ಗಳ ಒಂದು ಗುಂಪಿಗೆ ಪೋರ್ಟ್‌ಪೋಲಿಯೋ (ಬಂಡವಾಳ) ಎಂದು ಕರೆಯುತ್ತಾರೆ. ಪೋರ್ಟ್‌ಫೋಲಿಯೋ ಅಪಾಯ (ಗಂಡಾಂತರ) (risk) ವನ್ನು ವೈವಿಧ್ಯಗೊಳಿಸಲು ಅವಕಾಶವನ್ನು ನೀಡಿ ಲಾಭವನ್ನು ಗರಿಷ್ಟವಾಗುವಂತೆ ಮಾಡುವುದಾಗಿದೆ. ಆದರೆ ಮಾರುಕಟ್ಟೆಯು ಗಂಡಾಂತರಗಳಿಂದ ಹೊರತಾಗಿಲ್ಲ. ಪ್ರತಿ ಆಸ್ತಿಯೊಂದಿಗೆ ಎಂದು ಪ್ರಕಾರದ ಗಂಡಾಂತರಗಳಿರುತ್ತವೆ.

(a) ವೈವಿಧ್ಯಮಯ (diversified)) ಗಂಡಾಂತರಗಳು.

(b) ವೈವಿಧ್ಯಗೊಳಿಸಲಾಗದ ಗಂಡಾಂತರ

ಅತ್ಯುತ್ತಮವಾದ ಪೋರ್ಟ್‌ಪೋಲಿಯೋ ಸಹ ಮಾರುಕಟ್ಟೆಯ ಗಂಡಾಂತವನ್ನು ತೆಗೆದು ಹಾಕಲು ಸಾಧ್ಯವಿಲ್ಲ. ಆದರೆ ವೈವಿಧ್ಯಮಯ ಗಂಡಾಂತರವನ್ನು ಕಡಿಮೆ ಮಾಡಬಹುದು.

Scanned with CamScanner

ನಿರ್ವಹಿಸಬೇಕು. ಮತ್ತು ಬದಲಾವಣೆಗಳೊಂದಿಗೆ ತನ್ನ ಕಕ್ಷಿದಾರನಿಗೆ ನವೀಕರಿಸಬೇಕು. ಇದು ಕೆಳಗಿನ ಕಾರ್ಯಗಳನ್ನು ಒಳಗೊಂಡಿರುತ್ತದೆ.

* ಗ್ರಾಹಕರ ಹೂಡಿಕೆಯ ಉದ್ದೇಶ ಮತ್ತು ನಿಧಿಗಳ ಲಭ್ಯತೆಯನ್ನು ಅರ್ಥಮಾಡಿ ಕೊಳ್ಳಬೇಕು.
* ಮೇಲಿನ ಉದ್ದೇಶಕ್ಕೆ ತಕ್ಕಂತೆ ಹೂಡಿಕೆಯನ್ನು ಹೊಂದಿಸಬೇಕು.
* ಹೂಡಿಕೆ ನೀತಿಯನ್ನು ಶಿಫಾರಸು ಮಾಡುವುದು.
* ಗಂಡಾಂತರವನ್ನು ಕಡಿಮೆಗೊಳಿಸುವುದು.
* ಕಕ್ಷಿದಾರನೊಂದಿಗೆ ಚರ್ಚೆಯು ಆಧಾರದ ಮೇಲೆ ಹೂಡಿಕೆಯನ್ನು ಕೈಗೊಳ್ಳುವುದು.
* ಕಾಲಕ್ಕೆ ತಕ್ಕಂತೆ ಆಸ್ತಿ ಹಂಚಿಕೆಯನ್ನು ಬದಲಾಯಿಸುವುದು.

ಪೋರ್ಟಫೋಲಿಯೋ ನಿರ್ವಹಣೆಯ ಪ್ರಕಾರಗಳು (Types of Portfolio Management):

ಬಂಡವಾಳ ನಿರ್ವಹಣೆಯು ಸೇವೆಗಳನ್ನು ಎರಡು ವಿಶಾಲ ವರ್ಗಗಳಾಗಿ ವಿಂಗಡಿಸಲಾಗಿದೆ.

I. ಚಟುವಟಿಕೆಯ ಆಧಾರದ ಮೇಲೆ (On the Basis of Level of activity)

(a) ಸಕ್ರಿಯ (Active) ಪೋರ್ಟಫೋಲಿಯೋ ನಿರ್ವಹಣೆ

(b) ನಿಷ್ಕ್ರಿಯ (Passive)) ಪೋರ್ಟಫೋಲಿಯೋ ನಿರ್ವಹಣೆ

II. ವಿವೇಚನಾ ಪೋರ್ಟಫೋಲಿಯೋ ನಿರ್ವಹಣೆ (On the basis of discretionary Powers)

(a) ವಿವೇಚನಾ ಪೋರ್ಟಫೋಲಿಯೋ ನಿರ್ವಹಣೆ (Discretionary PM)

(b) ವಿವೇಚನೆಯಲ್ಲದ ಪೋರ್ಟಫೋಲಿಯೋ ನಿರ್ವಹಣೆ (Non Discretionary PM)

(a) ಸಕ್ರಿಯ (Active) ಪೋರ್ಟಫೋಲಿಯೋ ನಿರ್ವಹಣೆ : ಹೆಸರೇ ಸೂಚಿಸುವಂತೆ ಸಕ್ರಿಯ ಪೋರ್ಟಫೋಲಿಯೋ ನಿರ್ವಹಣಾ ಸೇವೆಯಲ್ಲಿ ವ್ಯವಸ್ಥಾಪಕರು ವ್ಯಕ್ತಿಗಳಿಗೆ ಗರಿಷ್ಠ ಲಾಭವನ್ನು ಖಚಿತಪಡಿಸಿಕೊಳ್ಳಲು

Scanned with CamScanner

ಭದ್ರತೆಗಳ (Securities) ಖರೀದಿ ಮತ್ತು ಮಾರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ.

(b) **ನಿಷ್ಕ್ರಿಯ (Passive)) ಪೋರ್ಟಫೋಲಿಯೋ ನಿರ್ವಹಣೆ :** ನಿಷ್ಕ್ರಿಯ ಪೋರ್ಟಫೋಲಿಯೋ ನಿರ್ವಹಣೆಯಲ್ಲಿ ವ್ಯವಸ್ಥಾಪಕ. ಪ್ರಸ್ತುತ ಮಾರುಕಟ್ಟೆ ಸನ್ನಿವೇಶಕ್ಕೆ ಹೊಂದಿಕೆಯಾಗುವಂತೆ ವಿನ್ಯಾಸಗೊಳಿಸಲಾದ ಸ್ಥಿರ ಪೋರ್ಟ್ ಫೋಲಿಯೋದೊಂದಿಗೆ ವ್ಯವಹರಿಸುತ್ತಾರೆ.

(c) **ವಿವೇಚನೆ ಪೋರ್ಟಫೋಲಿಯೋ ನಿರ್ವಹಣಾ ಸೇವೆಗಳು (Discretionay PortFolio Management):** ಈ ಪ್ರಕಾರದ ಸೇವೆಗಳಲ್ಲಿ ಒಬ್ಬ ವ್ಯಕ್ತಿಯು ತನ್ನ ಪರವಾಗಿ ತನ್ನ ಹಣಕಾಸಿನ ಅಗತ್ಯಗಳನ್ನು ನೋಡಿಕೊಳ್ಳಲು ನಿರ್ವಾಹಕರಿಗೆ ಅಧಿಕಾರ ನೀಡುತ್ತಾನೆ. ಪೋರ್ಟ್ ಫೋಲಿಯೋ ನಿರ್ವಾಹಕನಿಗೆ ವ್ಯಕ್ತಿಯು ಹಣವನ್ನು ನೀಡುತ್ತಾನೆ. ಅವನು ತನ್ನ ಎಲ್ಲಾ ಹೂಡಿಕೆ ಅಗತ್ಯತೆಗಳು, ಕಾಗದ ಕೆಲಸ, ದಸ್ತಾವೇಜು, ಫೈಲಿಂಗ್ ಮುಂತಾದವುಗಳನ್ನು ನೋಡಿಕೊಳ್ಳುತ್ತಾನೆ. ವಿವೇಚನೆಯಿಂದ ಮ್ಯಾನೇಜರ ತನ್ನ ಗ್ರಾಹಕರ ಪರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾನೆ.

(d) **ವಿವೇಚನೆಯಲ್ಲದ ಪೋರ್ಟಫೋಲಿಯೋ ನಿರ್ವಹಣಾ ಸೇವೆಗಳು (Non discretionay PortFolio Management):** ಇಲ್ಲಿ ಮ್ಯಾನೇಜರ ತನ್ನ ಗ್ರಾಹಕರಿಗೆ ಒಳ್ಳೆಯದು ಅಥವಾ ಕೆಟ್ಟದ್ದನ್ನು ಸಲಹೆ ಮಾಡುಬಹುದು ಆದರೆ ಗ್ರಾಹಕನಿಗೆ ತನ್ನ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಪೂರ್ಣ ಹಕ್ಕನ್ನು ಹೊಂದಿದ್ದಾನೆ.

ಪೋರ್ಟಫೋಲಿಯೋ ನಿರ್ವಹಣೆಯ ಉದ್ದೇಶಗಳು (Objectives of PM):

ಪೋರ್ಟಫೋಲಿಯೋ ಮ್ಯಾನೇಜರ್ ಪೋರ್ಟಫೋಲಿಯವನ್ನು ನಿರ್ಮಿಸಿದಾಗ ಒಬ್ಬ ವ್ಯಕ್ತಿಯು ನಿರೀಕ್ಷೆಯ ಆಧಾರದ ಮೇಲೆ ಈ ಕೆಳಗಿನ ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟು ಕೊಳ್ಳಬೇಕು. ಇವುಗಳಲ್ಲಿ ಒಂದು ಅಥವಾ ಹೆಚ್ಚಿನದು ಆಯ್ಕೆ ಮಾಡುವುದು ಹೂಡಿಕೆದಾರರ ವೈಯಕ್ತಿಕ ಆದ್ಯತೆಯನ್ನು ಅವಲಂಭಿಸಿರುತ್ತದೆ.

1. ಬಂಡವಾಳದ ಬೆಳವಣಿಗೆ
2. ಹೂಡಿಕೆ ಮಾಡಿದ ಅಸಲಿನ ಮೊತ್ತದ ಭದ್ರತೆ
3. ದ್ರವ್ಯತೆ

Scanned with CamScanner

4. ಹೂಡಿಕೆ ಮಾಡಿದ ಭದ್ರತೆಗಳ ಮಾರುಕಟ್ಟೆ
5. ಗಂಡಾಂತರ ವೈವಿಧ್ಯೀಕರಣ
6. ಸ್ಥಿರ ಆದಾಯ
7. ತೆರಿಗೆ ಯೋಜನೆ

ಪೋರ್ಟಫೋಲಿಯೋ ನಿರ್ವಹಣೆಯ ಪ್ರಾಮುಖ್ಯತೆ (Importance of PortFolio Management): ಬಂಡವಾಳ ನಿರ್ವಹಣೆಯ ಪ್ರಾಮುಖ್ಯತೆ ಕೆಳಗಿನಂತಿದೆ

1. ಪೋರ್ಟಫೋಲಿಯೋ ನಿರ್ವಹಣೆ ವ್ಯಕ್ತಿಗಳಿಗೆ ಅವರ ಆದಾಯ ಬಜೆಟ್, ವಯಸ್ಸು ಮತ್ತು ಅಪಾಯ (ಗಂಡಾಂತರ)ಗಳನ್ನು ಕೈಗೊಳ್ಳುವ ಸಾಮರ್ಥ್ಯಕ್ಕೆ ಅನುಗುಣವಾಗಿ ಉತ್ತಮ ಹೂಡಿಕೆ ಯೋಜನೆಯನ್ನು ಒದಗಿಸುತ್ತದೆ.
2. ಇದು ಹೂಡಿಕೆಯಲ್ಲಿ ಉಂಟಾಗುವ ಗಂಡಾಂತರಗಳನ್ನು ಕಡಿಮೆ ಮಾಡುತ್ತದೆ ಮತ್ತು ಲಾಭಗಳಿಸುವ ಅವಕಾಶಗಳನ್ನು ಹೆಚ್ಚಿಸುತ್ತದೆ.
3. ವ್ಯವಸ್ಥಾಪಕರು ಗ್ರಾಹಕರ ಹಣಕಾಸಿನ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಕಡಿಮೆ ಗಂಡಾಂತರಗಳನ್ನು ಹೊಂದಿರುವ ಅವರಿಗೆ ಉತ್ತಮ ಮತ್ತು ವಿಶಿಷ್ಟ ಹೂಡಿಕೆ ನೀತಿಯನ್ನು ಸೂಚಿಸುತ್ತಾರೆ.
4. ಪೋರ್ಟಫೋಲಿಯೋ ನಿರ್ವಹಣೆಯು ಗ್ರಾಹಕರಿಗೆ ಅವರ ಅಗತ್ಯತೆಗಳಿಗೆ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ಹೊಂದಿಕೆ ಮಾಡಿದ ಹೂಡಿಕೆ (Customise) ಪರಿಹಾರಗಳನ್ನು ಒದಗಿಸಲು ಪೋರ್ಟಫೋಲಿಯೋ ವ್ಯವಸ್ಥಾಪಕರಿಗೆ ಅನುವು ಮಾಡಿಕೊಡುತ್ತದೆ.
5. ತೆರಿಗೆ ಕಾನೂನುಗಳಲ್ಲಿನ ಬದಲಾವಣೆಗಳನ್ನು ತೆಗೆದುಕೊಂಡು ಹೂಡಿಕೆ ಮಾಡಬಹುದು.

ಪೋರ್ಟಫೋಲಿಯೋ ನಿರ್ವಹಕರ ಜವಾಬ್ದಾರಿಗಳು (Responsibilities of PortFolio Management):

ಭವಿಷ್ಯದಲ್ಲಿ ಖಾತರಿಪಡಿಸಿದ ಆದಾಯಕ್ಕಾಗಿ ಲಭ್ಯವಿರುವ ಉತ್ತಮ ಹೂಡಿಕೆ ಮಾಡಲು ಸಹಾಯ ಮಾಡುವವನೆ ಪೋರ್ಟಫೋಲಿಯೋ ವ್ಯವಸ್ಥಾಪಕ. ಇವನು ಒಬ್ಬ ವ್ಯಕ್ತಿಗೆ ಹೂಡಿಕೆ ಮಾಡಲು ಸಹಾಯ ಮಾಡುತ್ತಾನೆ. ಅವನ ಜವಾಬ್ದಾರಿಗಳು ಇಂತಿವೆ

Scanned with CamScanner

1. ಮಾರುಕಟ್ಟೆಯಲ್ಲಿ ಲಭ್ಯವಿರುವ ವಿವಿಧ ಹೂಡಿಕೆ ಪರಿಕರಗಳು (tools) ಮತ್ತು ಪ್ರತಿ ಯೋಜನೆಗೆ ಸಂಬಂಧಿಸಿದ ಪ್ರಯೋಜನಗಳ ಬಗ್ಗೆ ಗ್ರಾಹಕರಿಗೆ ಅರಿವು ಮೂಡಿಸುವ ಜವಾಬ್ದಾರಿಯನ್ನು ನಿರ್ವಾಹಕ ಹೊಂದಿರಬೇಕು.
2. ವ್ಯವಸ್ಥಾಪಕರು ತಮ್ಮ ಗ್ರಾಹಕರ ಹಿನ್ನೆಲೆಯನ್ನು ವಿಶ್ಲೇಷಿಸುವುದು ಅವಶ್ಯಕ. ಅವರು ಹೂಡಿಕೆ ಮಾಡುವ ಸಾಮರ್ಥ್ಯವನ್ನು ತಿಳಿದುಕೊಳ್ಳಿ.
3. ಹಣಕಾಸಿನ ಮಾರುಕಟ್ಟೆಯಲ್ಲಿನ ಇತ್ತೀಚಿನ ಬದಲಾವಣೆಗಳನ್ನು ತಿಳಿದಿರಬೇಕು.
4. ಕನಿಷ್ಟ ಗಂಡಾಂತರ ಮತ್ತು ಗರಿಷ್ಠ ಆದಾಯದೊಂದಿಗೆ ಉತ್ತಮ ಯೋಜನೆಗಳನ್ನು ಸೂಚಿಸಿ.
5. ಗ್ರಾಹಕರೊಂದಿಗೆ ಪಾರದರ್ಶಕವಾಗಿರಬೇಕು. ನಿಯಮ ಮತ್ತು ಷರತ್ತುಗಳನ್ನು ಅವರಿಗೆ ತಿಳಿಸಿ. ಏನನ್ನೂ ಮುಚ್ಚಿಡಬಾರದು.
6. ದೀರ್ಘಾವಧಿ ಸಂಬಂಧವಿರುವುದರಿಂದ ನಿಮ್ಮ ಗ್ರಾಹಕರೊಂದಿಗೆ ಪ್ರಾಮಾಣಿಕವಾಗಿರಿ.
7. ನಿರ್ವಾಹಕರು ಪಕ್ಷಪಾತವಿಲ್ಲದೆ ಮತ್ತು ಸಂಪೂರ್ಣ ವೃತ್ತಿಪರವಾಗಿರಬೇಕು. ನಿಮ್ಮ ಕಮಿಷನ್ ಹಣವನ್ನು ನೋಡಬೇಡಿ.
8. ನಿಮ್ಮ ಕಕ್ಷಿದಾರನಿಗೆ ಮಾರ್ಗದರ್ಶನ ನೀಡುವುದು ಮತ್ತು ಉತ್ತಮ ಹೂಡಿಕೆ ಯೋಜನೆಯನ್ನು ಆಯ್ಕೆ ಮಾಡಲು ಅವರಿಗೆ ಸಹಾಯ ಮಾಡಿ.
9. ಎಲ್ಲಿ ಹೂಡಿಕೆ ಮಾಡಬೇಕು ಮತ್ತು ಎಲ್ಲಿ ಹೂಡಿಕೆ ಮಾಡಬಾರದು ಎಂದು ಗ್ರಾಹಕರಿಗೆ ಸೂಚಿಸಿ.
10. ಮಾರುಕಟ್ಟೆಯ ಏರಿಳಿತಗಳನ್ನು ಪರಿಶೀಲಿಸಿ ಮತ್ತು ಅದಕ್ಕೆ ತಕ್ಕಂತೆ ವ್ಯಕ್ತಿಗೆ ಮಾರ್ಗದರ್ಶನ ಮಾಡಿ.
11. ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವವರಾಗಿರಬೇಕು. ತಪ್ಪು ನಿರ್ಣಯಗಳನ್ನು ತೆಗೆದುಕೊಂಡು ಗ್ರಾಹಕರಿಗೆ ನಷ್ಟ ಉಂಟುಮಾಡಬಾರದು.
12. ನಿಮ್ಮ ಗ್ರಾಹಕರೊಂದಿಗೆ ನಿಯಮಿತವಾಗಿ ಸಂವಹನ ನಡೆಸಿ. ಅವರನ್ನು ನಿರ್ಲಕ್ಷಿಸಬೇಡಿ. ಕಷ್ಟಪಟ್ಟು ಸಂಪಾದಿಸಿದ ಹಣವನ್ನು ದೀರ್ಘಾವಧಿಯಲ್ಲಿ ಪ್ರಯೋಜನವಾಗುವಂತಹ ಜವಾಬ್ದಾರಿ ನಿಮ್ಮ ಮೇಲಿದೆ.
13. ಗ್ರಾಹಕರೊಂದಿಗೆ ತಾಳ್ಮೆಯಿಂದಿರಿ.

Scanned with CamScanner

14. ಗ್ರಾಹಕರ ಪರವಾಗಿ ಪ್ರಮುಖ ಡಾಕ್ಯುಮೆಂಟ್ (ಕಾಗದಪತ್ರ)ಗಳಿಗೆ ಸಹಿ ಮಾಡಬೇಡಿ. ಅವರಿಗೆ ಒತ್ತಡ ಹೇರಬೇಡಿ.

6. ಹೂಡಿಕೆಯ ನೀತಿ ತತ್ವಗಳು |(Principles of investment policy) :

ವಾಣಿಜ್ಯ ಬ್ಯಾಂಕು ಇತರರಿಗೆ ಸಾಲಗಳನ್ನು ನೀಡುವಾಗ ಬ್ಯಾಂಕು ಮತ್ತು ತತ್ವಗಳನ್ನು ಅನುಸರಿಸಬೇಕೆಂಬುದನ್ನು ಹೂಡಿಕೆ ನೀತಿಯು ತಿಳಿಸುತ್ತದೆ. ಠೇವಣಿಯಾಗಿ ಇರಿಸಿಕೊಂಡ ಹಣವನ್ನು ಸಾರ್ವಜನಿಕರಿಗೆ ಸಾಲ ನೀಡುವಾಗ ಬ್ಯಾಂಕೋದ್ಯಮವು ವಿಶೇಷ ಎಚ್ಚರಿಕೆಯನ್ನು ಪಡಿಸಬೇಕಾಗುತ್ತದೆ. ಸಾರ್ವಜನಿಕರಿಂದ ಸ್ವೀಕರಿಸಿದ ಠೇವಣಿಯು ಬ್ಯಾಂಕಿನ ಹೊಣೆಗಾರಿಕೆಯಾಗಿರುತ್ತದೆ. ಆದರೆ ಬ್ಯಾಂಕು ಇತರರಿಗೆ ನೀಡಿದ ವಿವಿಧ ಬಗೆಯ ಸಾಲಗಳು ಅದರ ಆಸ್ತಿಗಳಾಗಿವೆ. ಈ ಆಸ್ತಿಗಳಿಂದಲೇ ಬ್ಯಾಂಕಿಗೆ ಆದಾಯ ಬರುತ್ತದೆ. ಒಂದು ವೇಳೆ ಆದಾಯ ಇಲ್ಲದ್ದಿದರೆ ಬ್ಯಾಂಕು ಠೇವಣಿದಾರರಿಗೆ ಬಡ್ಡಿಯನ್ನು ಮತ್ತು ಪೇರುದಾರರಿಗೆ ಲಾಭಂಶವನ್ನು ಕೊಡಲು ಸಾಧ್ಯವಾಗುವುದಿಲ್ಲ. ಅಜಾಗರೂಕತೆಯಿಂದ ಸಾಲ ನೀಡಿ ಅದು ಮರುಪಾವತಿಯಾಗದಿದ್ದರೆ, ಬ್ಯಾಂಕು ದಿವಾಳಿಯ ಅಂಚನ್ನು ತಲುಪುತ್ತದೆ.

ತನ್ನ ಬಳಿಯಿರುವ ಹಣವನ್ನು ಬ್ಯಾಂಕು ಹೇಗೆ ವಿನಿಯೋಗಿಸಿದೆ ಎಂಬುದು ಆಸ್ತಿಗಳ (ಲೇಣಿ) ಭಾಗದಿಂದ ವ್ಯಕ್ತವಾಗುತ್ತದೆ. ಆಸ್ತಿಗಳನ್ನು ವಿನಿಯೋಗಿಸುವಾಗ ಬ್ಯಾಂಕು ಪ್ರಮುಖವಾಗಿ ಮೂರು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಅವುಗಳೆಂದರೆ (1) ದ್ರವತ್ವ, (2) ಲಾಭದಾಯಕತ್ವ ಮತ್ತು (3) ಸುರಕ್ಷತೆ.

1. **ದ್ರವತ್ವ (Liquidity) :** ದ್ರವತ್ವ ಎಂದರೆ ಬ್ಯಾಂಕು ತನ್ನ ಬಳಿ ನಗದು ರೂಪದಲ್ಲಿಟ್ಟುಕೊಂಡಿರುವ ಠೇವಣಿಯ ಹಣ. ಠೇವಣಿದಾರರ ಬೇಡಿಕೆಯನ್ನು ಈಡೇರಿಸಲು ಬ್ಯಾಂಕು ಸದಾ ಸಿದ್ಧವಾದ ಸ್ಥಿತಿಯಲ್ಲಿರುತ್ತದೆ. ಬ್ಯಾಂಕು ಸಾರ್ವಜನಿಕ ವಿಶ್ವಾಸದ ಮೇಲೆ ಕಾರ್ಯ ನಿರ್ವಹಿಸುವ ಸಂಸ್ಥೆಯಾಗಿರುತ್ತದೆ. ಬ್ಯಾಂಕು ಸಾರ್ವಜನಿಕ ವಿಶ್ವಾಸದ ಮೇಲೆ ಕಾರ್ಯ ನಿರ್ವಹಿಸುವ ಸಂಸ್ಥೆಯಾಗಿರುತ್ತದೆ. ಸಾರ್ವಜನಿಕರು ಠೇವಣಿಗಳನ್ನು ಇಡದಿದ್ದರೆ ಬ್ಯಾಂಕಿನ ಕಾರ್ಯಾಚರಣೆಗೆ ಹಣವೇ ಒದಗುವುದಿಲ್ಲ. ಠೇವಣಿದಾರನು ಠೇವಣಿಯಾಗಿರಿಸಿದ ಹಣವನ್ನು ಮರಳಿ ಕೇಳಿದಾಗ ಬ್ಯಾಂಕು ಕೊಡುವಂತಿರಬೇಕು. ಇಲ್ಲದಿದ್ದರೆ ಬ್ಯಾಂಕು ತನ್ನ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ. ಪರಿಣಾಮವಾಗಿ ಬ್ಯಾಂಕಿಗೆ ತನ್ನ ಕಾರ್ಯವನ್ನು ಮುಂದುವರೆಸಲು ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ಠೇವಣಿದಾರರ ಬೇಡಿಕೆಗಳನ್ನು ಈಡೇರಿಸಲು ಬ್ಯಾಂಕುಗಳು ತಮ್ಮ ಬಳಿ ದ್ರವತ್ವವನ್ನು

Scanned with CamScanner

ಕಾಯ್ದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಪ್ರೊ. ಆರ್. ಎಸ್. ಸೇಯರ್ಸ್ ಪ್ರಕಾರ ದ್ರವತ್ವ ಎಂದರೆ "ಠೇವಣಿದಾರರ ಹಣದ ಬೇಡಿಕೆಯನ್ನು ಈಡೇರಿಸುವುದು".

ಬ್ಯಾಂಕು ಠೇವಣಿಗಳ ಎಲ್ಲ ಹಣವನ್ನೂ ನಗದು ರೂಪದಲ್ಲಿಯೇ ಇಟ್ಟುಕೊಂಡಿರಬೇಕಾಗಿಲ್ಲ. ಬ್ಯಾಂಕಿಗೆ ನೂರಕ್ಕೆ ನೂರರಷ್ಟು ಹಿಂದಿರುಗಿಸುವ ಶಕ್ತಿ ಬರುತ್ತದೆ. ಠೇವಣಿದಾರರೆಲ್ಲರೂ ಒಂದೇ ವೇಳೆಗೆ ಬ್ಯಾಂಕಿಗೆ ಹಣ ಕೇಳಲು ಬಂದರೂ, ಬ್ಯಾಂಕು ಅವರ ಹಣವನ್ನು ತಕ್ಷಣವೇ ಹಿಂದುರಿಗಿಸಬಹುದಾಗಿದೆ. ಇಲ್ಲಿ ಬ್ಯಾಂಕು ನೂರಕ್ಕೆ ನೂರರಷ್ಟು 'ದ್ರವತ್ವ' ತತ್ವವನ್ನು ಪಾಲಿಸಿದೆಯೆಂದು ಹೇಳುತ್ತೇವೆ. ಇದರಿಂದ ಬ್ಯಾಂಕು ತನ್ನ ಠೇವಣಿದಾರರೆಲ್ಲರ, ಸಾರ್ವಜನಿಕರ ವಿಶ್ವಾಸವನ್ನು ಅತಿ ಸುಲಭವಾಗಿಗಳಿಸುತ್ತದೆ. ಆದರೆ ಹೀಗೆ ಮಾಡುವುದರಿಂದ ಬ್ಯಾಂಕು 'ಲಾಭದಾಯಕತ್ವ'ದ ತತ್ವವನ್ನು ಸಂಪೂರ್ಣವಾಗಿ ಗಾಳಿಗೆ ತೂರಿದಂತಾಗುತ್ತದೆ.

2. **ಲಾಭದಾಯಕತ್ವ (Profitability)** ವಾಣಿಜ್ಯ ಬ್ಯಾಂಕು ಒಂದು ಖಾಸಗಿ ಸಂಸ್ಥೆಯಾಗಿದ್ದು ಅದು ಇತರ ವ್ಯಾಪಾರಿ ಸಂಸ್ಥೆಗಳಂತೆ ಲಾಭಗಳಿಸುವ ಉದ್ದೇಶವನ್ನು ಹೊಂದಿರುತ್ತದೆ. ತನ್ನ ಷೇರುದಾರರಿಗೆ ಆದಷ್ಟು ಹೆಚ್ಚು ಲಾಭ ಹಂಚಬೇಕೆಂಬ ಗುರಿಯನ್ನಿಟ್ಟುಕೊಂಡಿರುತ್ತದೆ. ಬ್ಯಾಂಕು ತನ್ನ ಸಿಬ್ಬಂದಿಯ ಸಂಬಳವನ್ನು ಕೊಡಬೇಕು. ಠೇವಣಿಗಳ ಮೇಲೆ ಬಡ್ಡಿ ಕೊಡಬೇಕು. ತನ್ನ ವ್ಯವಹಾರದ ಅನೇಕ ಬಗೆಯ ವೆಚ್ಚಗಳನ್ನು ನಿರ್ವಹಿಸಬೇಕು. ಈ ಎಲ್ಲ ವೆಚ್ಚಗಳನ್ನು ನಿರ್ವಹಿಸಿ ಅದಕ್ಕೆ ಬಹಳಷ್ಟು ನಿವ್ವಳ ಆದಾಯ ಉಳಿಯಬೇಕು. ಈ ನಿವ್ವಳ ಆದಾಯದೊಳಗಿಂದ ಕೆಲವೊಂದು ಹಣವನ್ನು ಕಾಯ್ದಿಟ್ಟ ನಿಧಿಯನ್ನು ನಿರ್ಮಿಸಲು ಮತ್ತು ಷೇರುದಾರರಿಗೆ ಲಾಭಾಂಶವನ್ನು ಹಂಚಲು ಉಪಯೋಗಿಸುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಲಾಭಾಂಶ ಹಂಚಿದರೆ, ಬ್ಯಾಂಕು ಷೇರುದಾರರ ಪ್ರೀತಿ, ವಿಶ್ವಾಸಗಳಿಸುತ್ತದೆ.

ಬ್ಯಾಂಕು ತನ್ನಲೇ ವಾದೇವಿ ವ್ಯವಹಾರ ಮಾಡುವಾಗ 'ಲಾಭದಾಯಕತ್ವ' ತತ್ವವನ್ನು ಅನುಸರಿಸಬೇಕಾಗುತ್ತದೆ. ಅದು ದೊಡ್ಡ ಪ್ರಮಾಣದಲ್ಲಿ ಸಾಲಗಳನ್ನು ನೀಡಿ, ಹೆಚ್ಚು ಆದಾಯಗಳಿಸಬೇಕಾಗುತ್ತದೆ. ಆದರೆ ಕೇವಲ ಲಾಭದ ವಿಚಾರದಿಂದ ಠೇವಣಿ ಎಲ್ಲ ಹಣವನ್ನು ಸಾಲ ನೀಡಿದರೆ ಬ್ಯಾಂಕುಗಳ ಅಸ್ತಿತ್ವಕ್ಕೆ ಗಂಡಾಂತರ ಬರುತ್ತದೆ. ಬ್ಯಾಂಕು ಠೇವಣಿದಾರರ ವಿಶ್ವಾಸವನ್ನು ಪ್ರಸಂಗ ಬರುತ್ತದೆ. ಎಲ್ಲಾ ಠೇವಣಿದಾರರು ತಮ್ಮ ತಮ್ಮ ಠೇವಣಿ ಹಣವನ್ನು ಪಡೆಯಲು ಬ್ಯಾಂಕಿಗೆ ಬಂದಾಗ, ಬ್ಯಾಂಕು ಠೇವಣಿದಾರರಿಗೆ ಹಣವನ್ನು ಕೊಡಲು ಅಸಮರ್ಥವಾಗಿರುತ್ತದೆ. ಈ ಸನ್ನಿವೇಶವನ್ನು 'ಬ್ಯಾಂಕುಗಳ ಮೇಲಿನ ದೌಡ (Run on the bank) ಎಂದು ಕರೆಯುತ್ತಾರೆ.

Scanned with CamScanner

ದ್ರವತ್ವ ಮತ್ತು ಲಾಭದಾಯಕತ್ವ (Liquidity and Profitability)

ದ್ರವತ್ವ ಮತ್ತು ಲಾಭದಾಯಕತ್ವ ಎಂಬ ಈ ಎರಡು ತತ್ವಗಳು ಪರಸ್ಪರ ವಿರುದ್ಧವಾಗಿದ್ದು, ಅವುಗಳಲ್ಲಿ ಸಮನ್ವಯ ಸಾಧಿಸುವುದು ಹಣ ಬ್ಯಾಂಕರನ ಕರ್ತವ್ಯವಾಗಿದೆ. ಯಾವ ಬ್ಯಾಂಕರನೂ ಒಂದು ತತ್ವಕ್ಕೆ ಪ್ರಾಮುಖ್ಯತೆ ನೀಡಿ ಮತ್ತೊಂದನ್ನೂ ಕಡೆಗಣಿಸಬಾರದು. ದ್ರವತ್ವಕ್ಕೆ ಹೆಚ್ಚು ಪ್ರಾಶಸ್ತ ನೀಡಿದರೆ ಅಧಿಕ ಪ್ರಮಾಣದಲ್ಲಿ ಬ್ಯಾಂಕು ನಗದು ಹಣವನ್ನಿಟ್ಟುಕೊಂಡಿರಬೇಕಾಗುತ್ತದೆ. ಇದರಿಂದ ಜನತೆಯ ವಿಶ್ವಾಸಗಳಿಸಲು ಸಾಧ್ಯ. ಆದರೆ **'ದ್ರವತ್ವ ನೂರಕ್ಕೆ ನೂರರಷ್ಟಾದರೆ ಲಾಭದಾಯಕತ್ವ ಶೂನ್ಯವಾಗುತ್ತದೆ'** ಆದರೆ ಷೇರುದಾರರು ಬ್ಯಾಂಕನ್ನು ಸ್ಥಾಪಿಸಿದ್ದು ಲಾಭ ಸಂಪಾದಿಸುವುದಕ್ಕಾಗಿ, ಬ್ಯಾಂಕು ಲಾಭವನ್ನು ಸಂಪಾದಿಸದಿದ್ದರೆ ಅದರ ಉದ್ದೇಶವೇ ವಿಫಲವಾಗುತ್ತದೆ. ಲಭಾ ಗಳಿಸುವುದೇ ಮುಖ್ಯ ಉದ್ದೇಶವಾಗಿದೆಯೆಂದು 'ಲಾಭದಾಯಕ ತತ್ವಕ್ಕೆ ನೂರಕ್ಕೆ ನೂರರಷ್ಟು ಪ್ರಾಮುಖ್ಯತೆ ನೀಡಿದರೆ 'ದ್ರವತ್ವ' ಶೂನ್ಯವಾಗಿ ಬ್ಯಾಂಕು ಜನತೆಯ ವಿಶ್ವಾಸಕ್ಕೆ ಎರವಾಗಬೇಕಾಗುತ್ತದೆ. ಅಂದರೆ ಲಾಭದಾಯಕತ್ವವು ನೂರಕ್ಕೆ ನೂರರಷ್ಟಾದರೆ ದ್ರವತ್ವವು ಶೂನ್ಯವಾಗುತ್ತದೆ. ಆದುದರಿಂದ ಬ್ಯಾಂಕು ಪರಸ್ಪರ ವಿರೋಧವಾಗಿರುವುದರಿಂದ ಈ ಎರಡು ತತ್ವಗಳಲ್ಲಿ ಸಮನ್ವಯ ಸಾಧಿಸಿದರೆ, ಬ್ಯಾಂಕಿಗೆ ಜನತೆಯು ವಿಶ್ವಾಸವನ್ನು ಕಾಯ್ದುಕೊಳ್ಳಲು ಹಾಗೂ ಅದೇ ವೇಳೆಗೆ ಅದಷ್ಟು ಲಾಬ ಸಂಪಾದಿಸಲು ಸಾದ.ವಾಗುತದೆ.



ಚಿತ್ರ : ದ್ರವತ್ವ ಮತ್ತು ಲಾಭದಾಯಕತ್ವ

Scanned with CamScanner

ಮೇಲಿನ ಚಿತ್ರದಿಂದ ಕಂಡು ಬರುವುದೇನೆಂದರೆ, ಠೇವಣಿಗಳ ಎಲ್ಲ ಹಣವನ್ನು ನಗದು ರೂಪದಲ್ಲಿ ಇಟ್ಟುಕೊಂಡರೆ (ದ್ರವತ್ವ ಶೇ. 100) ಲಾಭಕತ್ವವು ಶೂನ್ಯ (0) ವಾಗುತ್ತದೆ. ಮತ್ತು ಲಾಭದಾಯಕತ್ವಕ್ಕೆ ನೂರಕ್ಕೆ ನೂರರಷ್ಟು ಪ್ರಾಮುಖ್ಯತೆ ನೀಡಿದರೆ 'ದ್ರವತ್ವ' ಶೂನ್ಯವಾಗಿರುತ್ತದೆ. ಹೀಗೆ ದ್ರವತ್ವ ಮತ್ತು ಲಾಭದಾಯಕತ್ವ ಇವೆರಡೂ ಪರಸ್ಪರ ವಿರೋಧವಾಗಿದೆ. ನಗದು ಹಣಕ್ಕೆ 100ರಷ್ಟು ದ್ರವತ್ವವಿದೆ. ಆದರೆ ಅದರ ಪ್ರತಿಫಲ ಶೂನ್ಯ. ಹೆಚ್ಚು ಬಡ್ಡಿ ಗಳಿಸುವ ಸಾಲಗಳು ಇನ್ನೊಂದು ಕಡೆಯಲ್ಲಿವೆ. ಉದಾಹರಣೆಗೆ ಗ್ರಾಹಕರಿಗೆ ಕೊಟ್ಟ ವಿವಿಧ ಬಗೆಯ ಸಾಲಗಳು ಇವುಗಳಿಗೆ ಸಂಪೂರ್ಣ ಲಾಭದಾಯಕತ್ವವಿದೆ. ಆದರೆ ಅವುಗಳಿಗೆ ದ್ರವತ್ವವಿಲ್ಲ. ಅವುಗಳನ್ನು ಕೂಡಲೇ ನಗದು ಹಣಕ್ಕೆ ಪರಿವರ್ತಿಸಲು ಸಾಧ್ಯವಿಲ್ಲ.

ಒಟ್ಟಿನಲ್ಲಿ ಬ್ಯಾಂಕರನು ದ್ರವತ್ವ ಮತ್ತು ಲಾಭದಾಯಕತ್ವ ತತ್ವಗಳಲ್ಲಿ ಸಮನ್ವಯ ಸಾಧಿಸಬೇಕು. ಒಂದು ಕಡೆ ಬೇಡಿದ ಕೂಡಲೇ ಠೇವಣಿದಾರರಿಗೆ ಹಣ ನೀಡಲು ಸಾಧ್ಯವಾಗುವಂತೆ ಸಾಕಷ್ಟು ಹಣವನ್ನು ಹೊಂದಿರುವುದು, ಇನ್ನೊಂದು ಕಡೆ ತನ್ನ ವೆಚ್ಚಗಳನ್ನು ನಿರ್ವಹಿಸಲು ಮತ್ತು ಷೇರುದಾರರಿಗೆ ಲಾಭಾಂಶ ಹಂಚಲು ಬೇಕಾಗಿರುವ ಆದಾಯವನ್ನು ಗಳಿಸುವುದೂ ಬ್ಯಾಂಕಿಂಗ್ ಉದ್ದಿಮೆಯನ್ನು ಯಶಸ್ವಿಯಾಗಿ ನಡೆಸುವುದರ ಗುಟ್ಟು ಎಂದು ಹೇಳಬಹುದು.

3. **ಸುರಕ್ಷತೆಯ ತತ್ವ (Principle of safety)** ತಾನು ನೀಡಿದ ಸಾಲುಗಳು ಬ್ಯಾಂಕಿಗೆ ಸುರಕ್ಷಿತವಾಗಿ ಹಿಂದಿರುಗುವಂತಿರಬೇಕು. ಇಲ್ಲದಿದ್ದರೆ ಬ್ಯಾಂಕು ದಿವಾಳಿಯಾಗುವ ಪರಿಸ್ಥಿತಿ ಬರಬಹುದು. ಆದ್ದರಿಂದ ಸರಿಯಾದ ಭದ್ರತೆಯ ಮೇಲೆ ಮತ್ತು ಸಾಲಗಾರರ ಮರುಪಾವತಿ ಶಕ್ತಿಯನ್ನು ಅಂದಾಜು ಮಾಡಿ ಸಾಲ ನೀಡಬೇಕಾಗುತ್ತದೆ. ಅಂತೆಯೇ ಪ್ರತಿಫಲ ದಾಯಕವಾದ ಸಾಲ ಪತ್ರಗಳಲ್ಲಿ ಮತ್ತು ಹುಂಡಿಗಳಲ್ಲಿ ಹಣವನ್ನು ತೊಡಗಿಸುವುದು ಸೂಕ್ತವಾದುದು.

   ಮೇಲಿನ ಮೂರು ಪ್ರಮುಖ ತತ್ವಗಳನ್ನಲ್ಲದೆ ಈ ಕೆಳಗೆ ಕೊಟ್ಟ ಇತರ ತತ್ವಗಳನ್ನು ಬ್ಯಾಂಕುಗಳು ಗಮನಿಸುವುದು ಅವಶ್ಯವಿದೆ.

4. **ಹೂಟೆಯ ಉತ್ಪಾದಕತೆಯ ತತ್ವ (Principle of productivity of investment)** ಬ್ಯಾಂಕು ತನ್ನ ಹೆಚ್ಚುವರಿ ನಿಧಿಯನ್ನು ಶಾಶ್ವತ ಆದಾಯ ಬರುವಂತಹ ವಲಯಗಳಲ್ಲಿ ಹೂಟೆ ಮಾಡಬೇಕು. ಬ್ಯಾಂಕಿನ ಮುಖ್ಯ ಗುರಿ ಗರಿಷ್ಠ ಲಾಭಗಳಿಸುವುದು ಮತ್ತು ಆದರೆ ಹೆಚ್ಚಿನ ಆದಾಯ ಬರುವುದು ಹೂಟೆಯಿಂದ ಆದ್ದುದರಿಂದ ಬ್ಯಾಂಕು ಉತ್ಪಾದಕತೆಯ ಆಸ್ತಿಯ ಮೇಲೆ

Scanned with CamScanner

ಹೂಡಿ ಮಾಡಬೇಕು. ಹೆಚ್ಚಿನ ಉತ್ಪಾದಕತೆಯ ಹೂಡಿಯು ಹೆಚ್ಚಿನ ಆದಾಯವನ್ನು ತರುತ್ತದೆ. ಆದರೆ ಹೂಡಿಯನ್ನು ಮಾಡುವಾಗ ಸುರಕ್ಷತೆಯ ನಿಯಮವನ್ನು ಗಮನದಲ್ಲಿಟ್ಟುಕೊಳ್ಳಬೇಕು.

5. **ವೈವಿಧ್ಯತೆಯ ನಿಯಮ (Principle of Diversity)** ಬ್ಯಾಂಕರನು ತನ್ನಲ್ಲಿರುವ ಠೇವಣಿಯ ಹಣವನ್ನು ವಿವಿಧ ವಲಯಗಳಲ್ಲಿ ಹೂಡಿ ಮಾಡಬೇಕು. ಅವನು ವಿವಿಧ ಪ್ರಕಾರದ ಬಂಡವಾಳ ಪತ್ರಗಳಲ್ಲಿ ಹಣ ವಿನಿಯೋಗಿಸುವುದರಿಂದ ಬ್ಯಾಂಕಿಗೆ ಅಧಿಕ ಲಾಭ ಬರುತ್ತದೆ. ಅಲ್ಲದೆ ಬ್ಯಾಂಕರನು ತನ್ನಲ್ಲಿರುವ ಠೇವಣಿಯ ಹಣವನ್ನು ವಿವಿಧ ಪ್ರಕಾರದ ಉದ್ದಿಮೆಗಳಿಗೆ ಅಲ್ಪಾವಧಿ ಸಾಲ ನೀಡುವುದಕ್ಕಾಗಿ ಉಪಯೋಗಿಸಬೇಕು.

6. **ಬಂಡವಾಳ ಪತ್ರಗಳು ಮಾರಾಟವಾಗುವ ತತ್ವ (Principle of saleability of securities)** ಬ್ಯಾಂಕರನ ಬಳಿ ಇರುವ ಬಂಡವಾಳ ಪತ್ರಗಳು ಸುಲಭವಾಗಿ ತುರ್ತುಪರಿಸ್ಥಿತಿ (emergency) ಮಾರಾಟವಾಗುವಂತಿರಬೇಕು. ಒಂದು ವೇಳೆ ಬ್ಯಾಂಕು ಮಾರಾಟವಾಗದ (insaleable) ಬಂಡವಾಳ ಪತ್ರಗಳನ್ನು ಹೊಂದಿದರೆ ಅದಕ್ಕೆ ನಷ್ಟವಾಗುತ್ತದೆ. ಆದುದ್ದರಿಂದ ಬ್ಯಾಂಕರನು ಸುಲಭವಾಗಿ ಮಾರಾಟವಾಗುವ ಬಂಡವಾಳ ಪತ್ರಗಳಲ್ಲಿ ಮಾತ್ರ ಠೇವಣಿಯ ಹಣವನ್ನು ವಿನಿಯೋಗಿಸಬೇಕು. ಉದಾಹರಣೆಗೆ ಸರ್ಕಾರಿ ಸಾಲ ಪತ್ರಗಳು ಮತ್ತು ಭಾರಿ ಖ್ಯಾತಿಯುಳ್ಳ ಕಂಪನಿಗಳ ಷೇರು-ಡಿಬೆಂಚರುಗಳು ಸುಲಭವಾಗಿ ನಷ್ಟವಿಲ್ಲದೆ ಮಾರಾಟವಾಗುವಂಥ ಬಂಡವಾಳ ಪತ್ರಗಳಾಗಿವೆ.

7. **ಹೂಡಿಯ ಮೌಲ್ಯದಲ್ಲಿ ಸ್ಥಿರತೆಯ ತತ್ವ (Principle of saleability in the value of invesments)** ಯಾವ ಸ್ಟಾಕ್ (stock)ಮತ್ತು ಬಂಡವಾಳ ಪತ್ರಗಳ ಬೆಲೆಗಳಲ್ಲಿ ಸ್ಥಿರವಾಗಿರುತ್ತದೆಯೋ ಅಂಥ ಬಂಡವಾಳ ಪತ್ರಗಳಲ್ಲಿ ಮಾತ್ರ ಬ್ಯಾಂಕರನು ತನ್ನ ಠೇವಣಿಯ ಹಣವನ್ನು ವಿನಿಯೋಗಿಸಬೇಕು. ಒಂದು ವೇಳೆ ಬ್ಯಾಂಕರನು ವಿರಳಿತಕ್ಕೊಳಗಾಗುವ (fluctuate) ಸ್ಟಾಕ್ ಮತ್ತು ಬಂಡವಾಳ ಪತ್ರಗಳಲ್ಲಿ ವಿನಿಯೋಗಿಸಿದಂತೆ ನಷ್ಟವಾಗುತ್ತದೆ.

8. **ತೆರಿಗೆ ವಿನಾಯ್ತಿ ಹೊಂದಿದ ಹೂಡಿಗಳ ತತ್ವ (Principle of taxexemption of investments)** ಬ್ಯಾಂಕು ತನ್ನ ಠೇವಣಿಯ ಹಣವನ್ನು ಹೆಚ್ಚಾಗಿ ವರಮಾನ ತೆರಿಗೆ ಮತ್ತಿತರ ತೆರಿಗೆಗಳಿಂದ ವಿನಾಯ್ತಿ ಪಡೆದ ಬಂಡವಾಳ ಪತ್ರಗಳಲ್ಲಿ ವಿನಿಯೋಗಿಸಬೇಕು. ಇದರಿಂದ ಬ್ಯಾಂಕು ಅಧಿಕ ಲಾಭಗಳಿಸಬಹುದಾಗಿದೆ.

Scanned with CamScanner

ಬ್ಯಾಂಕಿನ ಹೂಡಿಕೆಗಳು (Bank's Investments)

ಸಾಮಾನ್ಯವಾಇಗ ಬ್ಯಾಂಕಿನ ಹೂಡಿಕೆಗಳಲ್ಲಿ ಎರಡು ಪ್ರಕಾರಗಳಿವೆ.

1. ಲಾಭದಾಯಕವಲ್ಲದ ಹೂಡಿಕೆಗಳು (Non-profitable investments)
2. ಲಾಭದಾಯಕ ಹೂಡಿಕೆಗಳು (Profitable investments)

ಪ್ರತಿಯೊಂದು ಬ್ಯಾಂಕು ತನ್ನ ನಿಧಿಯನ್ನು ಮೇಲಿನ ಎರಡು ಪ್ರಕಾರದ ಹೂಡಿಕೆಗಳಲ್ಲಿ ಹಂಚುತ್ತದೆ. ನಿಧಿಯನ್ನು ಹಂಚುವಾಗ ಬ್ಯಾಂಕು ಯಾವುದೇ ತತ್ವವನ್ನು ಅನುಸರಿಸುವುದಿಲ್ಲ. ಅದಾಗ್ಯೂ ಸುರಕ್ಷತೆಯ ಮತ್ತು ಲಾಭದಾಯಕತ್ವದ ನಿಯಮವನ್ನು ಅನುಸರಿಸಲೇಬೇಕಾಗುತ್ತದೆ.

ಲಾಭದಾಯಕವಲ್ಲದ ಹೂಡಿಕೆಗಳು (Non-profitable Investmets)

ಲಾಭದಾಯಕವಲ್ಲದ ಹೂಡಿಕೆಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು

1. **ಕಾಯ್ದಿಟ ಹಣ (Cash reserves)** ಪ್ರತಿಯೊಂದು ಬ್ಯಾಂಕು ತನ್ನ ದೈನಂದಿನ ಕಾರ್ಯಗಳಿಗೋಸ್ಕರ ಸ್ವಲ್ಪ ಹಣವನ್ನು ನಗದು ರೂಪದಲ್ಲಿ ಇಟ್ಟುಕೊಂಡಿರುತ್ತದೆ. ಹಣವನ್ನು ಠೇವಣಿದಾರರಿಗೆ ಬೇಡಿದ ತಕ್ಷಣ ಹಿಂತಿರುಗಿಸಬೇಕಾಗಿರುವುದರಿಂದ ಬ್ಯಾಂಕು ನಗದು ಹಣವನ್ನು ತನ್ನ ಬಳಿ ಇಟ್ಟುಕೊಳ್ಳುತ್ತದೆ. ನಗದು ಹಣದ ಪ್ರಮಾಣವು ಅಧಿಕವಾದರೆ ದ್ರವತ್ವವೂ ಅಧಿಕವಾಗುತ್ತದೆ. ಇದರಿಂದ ಬ್ಯಾಂಕಿಗೆ ನೂರಕ್ಕೆ ನೂರರಷ್ಟು ಹಣ ಹಿಂದಿರುಗಿಸುವ ಶಕ್ತಿ ಬರುತ್ತದೆ. ಠೇವಣಿದಾರರೆಲ್ಲರ ಒಂದೇ ವೇಳೆಗೆ ಬ್ಯಾಂಕಿಗೆ ಹಣ ಕೇಳಲು ಬಂದರೂ ಬ್ಯಾಂಕು ಅವರ ಹಣವನ್ನು ತಕ್ಷಣವೇ ಹಿಂದುರಿಗಿಸಬಹುದಾಗಿದೆ. ಇದರಿಂದ ಬ್ಯಾಂಕು ತನ್ನ ಠೇವಣಿದಾರರೆಲ್ಲರ ಹಾಗೂ ಸಾರ್ವಜನಿಕರ ವಿಶ್ವಾಸವನ್ನು ಸುಲಭವಾಗಿ ಗಳಿಸುತ್ತದೆ.

2. **ದೆಡ್ ಸ್ಟಾಕ್ (Dead stock)** ದೆಡ್ ಸ್ಟಾಕ್‌ಗಳು ಲಾಭದಾಯಕವಲ್ಲದ ಹೂಡಿಕೆಗಳಾಗಿದ್ದು ಇದರಿಂದ ಬ್ಯಾಂಕಿಗೆ ಯಾವ ಲಾಭವೂ ಬರುವುದಿಲ್ಲ. ಆದರೂ ಈ ಹೂಡಿಕೆಗಳು ಬ್ಯಾಂಕಿಗೆ ಅವಶ್ಯಕವಾಗಿದೆ. ಏಕೆಂದರೆ ಹೂಡಿಕೆಗಳಲ್ಲದಿದ್ದರೆ ಬ್ಯಾಂಕು ತನ್ನ ದೈನಂದಿನ ಕಾರ್ಯವನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಬರುವುದಿಲ್ಲ. ಕಟ್ಟಡ, ಪೀಠೋಪಕರಣ, ಆಫೀಸ್ ಉಪಕರಣ ಇತ್ಯಾದಿ ಲಾಭದಾಯಕವಲ್ಲದ ಹೂಡಿಕೆಗಳಾಗಿವೆ. ಈ ಆಸ್ತಿಗಳನ್ನು ಬೇಗನೆ ಮಾರಾಟ ಮಾಡಲು ಬರುವುದಿಲ್ಲ. ಆದ್ದುದರಿಂದ ಇವುಗಳಿಗೆ ಸತ್ತ ಶೇಖರಣೆ (Dead stock) ಎಂದು ಕರೆಯುತ್ತಾರೆ

Scanned with CamScanner

ಲಾಭದಾಯಕ ಹೂಟೆಗಳು (Profitable Investments)

ಕೆಳಗಿನವು ಬ್ಯಾಂಕಿನ ಲಾಭದಾಯಕ ಹೂಟೆಗಳಾಗಿವೆ.

1. ಕರೆ ಹಣ
2. ಅಲ್ಪಾವಧಿ ಸಾಲಗಳು
3. ಹುಂಡಿಗಳನ್ನು ಮುರಿಯುವುದು
4. ಸಾಲಗಳು ಮತ್ತು ಮುಂಗಡಗಳು
5. ವಿನಿಯೋಜಕಗಳಲ್ಲಿ ಹೂಟೆ

ಕಿಟಕಿ ಪ್ರದರ್ಶನ (Window dressing) ಕಿಟಕಿ ಅಲಂಕಾರ ವಿಧಾನವು ವಾಣಿಜ್ಯ ಬ್ಯಾಂಕುಗಳ ಆಸ್ತಿ–ಹೊಣೆಗಾರಿಕೆ (ಲೇಣಿ–ದೇಣಿ) ಪಟ್ಟಿಯ ತಯಾರಿಕೆಗೆ ಸಂಬಂಧಿಸಿದ ಒಂದು ಪಾರಿಭಾಷಿಕವಾಗಿದೆ. ಪ್ರತಿಯೊಂದು ವಾಣಿಜ್ಯ ಬ್ಯಾಂಕುಗಳು ಕಾನೂನಿನ ಪ್ರಕಾರ, ಒಂದು ನಿರ್ದಿಷ್ಟ ಪ್ರಮಾಣದ ನಗದು ಹಣವನ್ನು ತನ್ನ ಬಳಿ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಕೆಲವು ವೇಳೆ ನಿರ್ದಿಷ್ಟ ಪ್ರಮಾಣದ ಹಣವನ್ನು ಇರಿಸಿಕೊಳ್ಳಲು ಬ್ಯಾಂಕಿಗೆ ಸಾಧ್ಯವಾಗದಿರಬಹುದು. ಅಂತಹ ಸಂದರ್ಭದಲ್ಲಿ ಬ್ಯಾಂಕು ತನ್ನ ವಾರದ ವರದಿಯನ್ನು ಸಿದ್ಧಪಡಿಸುವ ಹಿಂದಿನ ದಿವಸ ಮತ್ತು ಅರ್ಧ ವಾರ್ಷಿಕ ಅಡಾವೆ ಪತ್ರಿಕೆಗಳನ್ನು ಪ್ರಕಟಿಸುವುದಕ್ಕಿಂತ ಒಂದು ದಿನ ಮೊದಲು ಹಣದ ಮಾರುಕಟ್ಟೆಯಿಂದ ತಮಗೆ ಬರಬೇಕಾದ ಹಣವನ್ನು ತಾತ್ಕಾಲಿಕವಾಗಿ ವಸೂಲಿ ಮಾಡಿಕೊಳ್ಳುತ್ತದೆ. ಇದರಿಂದ ವಾರದ ವರದಿಯನ್ನು ಅಥವಾ ಆಢಾವೆ ಪತ್ರಿಕೆಯನ್ನು ತಯಾರಿಸುವ ದಿವಸ ಕಾನೂನಿನ ಪ್ರಕಾರ ಎಷ್ಟು ಪ್ರಮಾಣದ ನಗದು (ದ್ರವ್ಯಕೋಶ) ಹಣವನ್ನು ಹೊಂದಿರಬೇಕೋ ಅಷ್ಟು ಪ್ರಮಾಣದಲ್ಲಾಗಲಿ ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಾಗಲಿ ಹೊಂದಿರಲು ಸಾಧ್ಯವಾಗುತ್ತದೆ. ಹೀಗೆ ತಾತ್ಕಾಲಿಕವಾಗಿ ಪಡೆದುಕೊಂಡು ಹಣವನ್ನು ಕಾನೂನಿನ ಕೊರತೆಯನ್ನು ತೃಪ್ತಿಪಡಿಸಿದ ಕೂಡಲೇ ಹಣದ ಮಾರುಕಟ್ಟೆಗೆ ಹಿಂದಿರುಗಿಸಬೇಕಾಗುತ್ತದೆ. ಅಂದರೆ ಅಢಾವೆ ಪತ್ರಿಕ ಪ್ರಕಟಿಸಿದ ಮಾರನೆಯ ದಿನವೇ ಪೇಟೆಯಿಂದ ವಸೂಲಿ ಮಾಡಿಕೊಂಡ ಹಣವನ್ನೆಲ್ಲ ಕೊಡುತ್ತದೆ. ಹೀಗೆ ಬ್ಯಾಂಕುಗಳು ತಾತ್ಕಾಲಿಕವಾಗಿ ಕೃತ್ರಿಮವಾಗಿ ತಮ್ಮ ಬಳಿ ಇರುವ ನಗದು ಹಣದ ಪ್ರಮಾಣವನ್ನು ವಾಸ್ತವಿಕವಾಗಿರುವುದಕ್ಕಿಂತಲೂ ಅಧಿಕವಾಗಿ ತೋರಿಸುವ ವಿಧಾನಕ್ಕೆ 'ಕಿಟಕಿ ಹೊರ ರೂಪಿಕೆ' ಅಥವಾ 'ಕಿಟಕಿ ಪ್ರದರ್ಶನ' ಎಂದು ಹೆಸರು. ಈ ವಿಧಾನವು ಮೊಟ್ಟ ಮೊದಲು ಇಂಗ್ಲೆಂಡಿನ ವಾಣಿಜ್ಯ ಬ್ಯಾಂಕುಗಳು ಅನುಸರಿಸಿದವು.

Scanned with CamScanner